ANANTHKUMAR PRATISHTHANA

# ಅನಂತಪಥ



**ಕೈ ತುತ್ತು ತಿನ್ನಿಸಿದ ಅಣ್ಣ**

ನಾನು ಕಂಡ ಅನಂತಕುಮಾರ್ ಮಾಲಿಕೆಯಲ್ಲಿ ಪುಟ-2

ಶ್ರೀ ಪ್ರಹ್ಲಾದ ಜೋಷಿ

ಸಂಪುಟ-1 ಏಪ್ರಿಲ್ - 2021 ಸಂಚಿಕೆ - 10

# ಬೇವು ಮತ್ತು ಯೂರಿಯಾ – ಒಂದು ಅಪೂರ್ವ ಸಂಗಮ




"ಋಷಿ ವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ ಜಸವು ಜನಜೀವನಕೆ – ಮಂಕುತಿಮ್ಮ"

ಕನ್ನಡದ ಮೇರು ಸಾಹಿತಿ ಡಾ| ಡಿ ವಿ ಗುಂಡಪ್ಪನವರ ಈ ಅಮರವಾಣಿಯನ್ನು ಕೇಳದ ಕನ್ನಡಿಗನಿಲ್ಲ. ಜನಜೀವನ ಉತ್ತಮವಾಗಬೇಕಾದರೆ ಭಾರತದ ಆರ್ಷೇಯ ಜ್ಞಾನ ಮತ್ತು ಆಧುನಿಕ ವಿಜ್ಞಾನ ಜೊತೆಜೊತೆಯಾಗಿ ಸಾಗಬೇಕು ಎಂದು ಡಿವಿಜಿಯವರು ಹೇಳಿದ ಮಾತನ್ನು ಭಾರತೀಯ ಕೃಷಿಕ್ಷೇತ್ರದ ಮಹತ್ತ್ವದ ಪ್ರಯೋಗವೊಂದಕ್ಕೆ ಅನ್ವಯಿಸಿ ಯಶಸ್ಸು ಕಂಡವರು ಅಂದಿನ ಕೇಂದ್ರ ರಾಸಾಯನಿಕ ಮತ್ತು ಗೊಬ್ಬರ ಖಾತೆಯ ಸಚಿವರಾದ ಶ್ರೀ ಅನಂತಕುಮಾರ್. ಈ ಪ್ರಯೋಗವೇ ಬೇವು ಲೇಪಿತ ಯೂರಿಯಾ ತಯಾರಿಕೆ ಮತ್ತು ಬಳಕೆ.

ಪಾರಂಪರಿಕ ಕೃಷಿಪದ್ಧತಿಯಲ್ಲಿ ಸಾರಜನಕದ ಮಹತ್ವವನ್ನು ನಮ್ಮ ಕೃಷಿಕರು ತಿಳಿದಿದ್ದರು. ದ್ವಿದಳ ಧಾನ್ಯಗಳನ್ನು ಕೀಳುವಾಗ ಅವುಗಳ ಬೇರುಗಳಲ್ಲಿರುವ ರೈಜೋಬಿಯಂ ಗಂಟುಗಳು ಭೂಮಿಯಲ್ಲಿಯೇ ಉಳಿದು ಅವು ವಾತಾವರಣದ ಸಾರಜನಕವನ್ನು ಮಣ್ಣಿಗೆ ಸೆಳೆದುಕೊಳ್ಳಲು ಸಹಾಯ ಮಾಡುತ್ತವೆ ಎಂದು ತಿಳಿದಿದ್ದ ರೈತರು, ಏಕದಳ ಮತ್ತು ದ್ವಿದಳ ಧಾನ್ಯಗಳನ್ನು ಪರ್ಯಾಯ ಬೆಳೆಗಳನ್ನಾಗಿ ಬೆಳೆಸುತ್ತಿದ್ದರು. ಇದರ ಜೊತೆಗೆ ಭೂಮಿಯ ಫಲವತ್ತತೆಯನ್ನು ಹೆಚ್ಚು ಮಾಡಲು ಬೇವಿನ ಗೊಬ್ಬರವನ್ನೂ ಬಳಸುತ್ತಿದ್ದರು. ಕಾಲಕ್ರಮೇಣ ನೀರಾವರಿ ಸೌಲಭ್ಯದಿಂದಲೋ ವಾಣಿಜ್ಯ ಬೆಳೆಗಳ ಮೇಲಿನ ಮೋಹದಿಂದಲೋ ಅಥವ ಅಜ್ಞಾನದಿಂದಲೋ ಕೃಷಿಕರು ಆಧುನಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳತೊಡಗಿದರು. ಬೆಳೆವಿನ್ಯಾಸದಲ್ಲಿ ತುಂಬ ಬದಲಾವಣೆ ಉಂಟಾಯಿತು. ಆಗ ಭೂಮಿಗೆ ಸಾರಜನಕವನ್ನು ಕೃತಕವಾಗಿ ಊಡಿಸುವ ಅಗತ್ಯ ಉಂಟಾಯಿತು. ಈ ಹಿನ್ನೆಲೆಯಲ್ಲಿ ಸಾರಜನಕದ ಸಂಯುಕ್ತವಾದ ಯೂರಿಯಾ ಎಂಬ ಜನಪ್ರಿಯ ರಸಗೊಬ್ಬರದ ಬಳಕೆ ಅನಿವಾರ್ಯವಾಯಿತು.

ನಮ್ಮ ದೇಶದ ಬಹುಭಾಗ ಮಳೆ ಆಧಾರಿತ ಕೃಷಿಪ್ರದೇಶವಾಗಿದೆ. ಮಳೆಗಾಲದಲ್ಲಿ ಮಣ್ಣಿಗೆ ಯೂರಿಯಾ ಬೆರೆಸಿದರೆ ಅದರ ಸತ್ವ ನೀರಿನಲ್ಲಿ ಬಹುಬೇಗ ಕರಗಿ ಕೊಚ್ಚಿಹೋಗುತ್ತದೆ. ನಾಟಿ ಮಾಡಿದ ಕೂಡಲೇ ಯೂರಿಯಾ ಕೊಡುವುದರಿಂದ ಅದನ್ನು ಒಮ್ಮೆಲೇ ಹೀರಿಕೊಂಡ ಸಸಿಗಳು ಪ್ರಾರಂಭದಲ್ಲಿ ಸೊಂಪಾಗಿ ಬೆಳೆದು ಬೆಳವಣಿಗೆಯ ಮುಂದಿನ ಹಂತಗಳಲ್ಲಿ ಸಾರಜನಕದ ಕೊರತೆಯಿಂದ ಸೊರಗಬಹುದು. ಬೇವಿನ ಗೊಬ್ಬರಕ್ಕೆ ಸಾರಜನಕದ ಬಿಡುಗಡೆಯನ್ನು ಸುಸ್ಥಿರಗೊಳಿಸುವ ಮತ್ತು ನಿಧಾನಗೊಳಿಸುವ ಗುಣವಿದೆ ಎಂದೂ ನಮ್ಮ ಕೃಷಿ ವಿಜ್ಞಾನಿಗಳಿಗೆ ತಿಳಿದಿತ್ತು. ಆದರೆ ಋಷಿವಾಕ್ಯದೊಡನೆ ವಿಜ್ಞಾನ ಕಲೆಯನ್ನು ಮೇಳವಿಸುವ ಇಚ್ಛಾಶಕ್ತಿ ಮಾತ್ರ ನಮ್ಮನ್ನು ಆಳುವ ನಾಯಕರಿಗಿರಲಿಲ್ಲ.

ಪುಟ 4 ರಲ್ಲಿ ಮುಂದುವರೆದಿದೆ

# ರಾಷ್ಟ್ರಜೀವನಕ್ಕೆ ಮಾರ್ಗದರ್ಶಕವಾದ ಸಮಾಜ ಸೇವೆ

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ**



ಭಾರತವು ಶ್ರೇಷ್ಠವಾದ ಎಲ್ಲ ವಿಷಯಗಳನ್ನು ಜಗತ್ತಿಗೆ ಕೊಟ್ಟಿರುವ ರಾಷ್ಟ್ರ. ನಮ್ಮ ದೇಶದ ಇತಿಹಾಸವನ್ನು ಗಮನಿಸಿದರೆ, ಹಿರಿಯರು ದಾಖಲಿಸಿದ ಅನೇಕ ಘಟನೆಗಳನ್ನು ಕೇಳಿದರೆ ನಮಗೆ ರೋಮಾಂಚನವಾಗುತ್ತದೆ. ಹಾಗಿದ್ದೂ ನಾವು ಶತಶತಮಾನಗಳ ಕಾಲ ನಿರಂತರವಾಗಿ ಪರಕೀಯರ ಆಳ್ವಿಕೆಯಲ್ಲಿ ಇದ್ದ ಕಾರಣ ನಮ್ಮ ಸ್ವಂತಿಕೆಯನ್ನು ಕಳೆದುಕೊಂಡು ಗುಲಾಮಿತನದ ಮಾನಸಿಕತೆಯನ್ನು ಹೊಂದಿದ್ದೇವೆ. ಆದರೆ ಎಲ್ಲ ಕಾಲದಲ್ಲಿಯೂ ದೇಶದ ಅನೇಕ ಮಹಾಪುರುಷರು ತಮ್ಮನ್ನು ತಾವು ರಾಷ್ಟ್ರಕ್ಕಾಗಿ ಸಮರ್ಪಿಸಿಕೊಂಡು ನಮ್ಮ ದೇಶದ ಈ ಸನಾತನ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳಲು ತಮ್ಮದೇ ಆದ ಪ್ರಯತ್ನಗಳನ್ನು ಮಾಡಿದ್ದಾರೆ. ಅನೇಕ ತ್ಯಾಗ, ಬಲಿದಾನಗಳು ನಡೆದಿವೆ. ಸಾಮಾನ್ಯ ಕುಟುಂಬಗಳಲ್ಲಿ ಜನಿಸಿಯೂ ಸ್ವಾತಂತ್ರಕ್ಕಾಗಿ ಹೋರಾಟ ಮಾಡಿದ ಶ್ರೀ ಬಾಲ ಗಂಗಾಧರ ತಿಲಕರು, ಶ್ರೀ ಅರವಿಂದ್ ಘೋಷ್, ಶ್ರೀ ಅಲ್ಲೂರಿ ಸೀತಾರಾಮ ರಾಜು ಅವರಂತಹ ಅನೇಕ ಹಿರಿಯರನ್ನು ನಾವು ಪ್ರತಿದಿನ ಸ್ಮರಿಸಿಕೊಳ್ಳಬೇಕು. ಅವರ ನಾಯಕತ್ವ ಹೇಗೆ ರಾಷ್ಟ್ರಜೀವನಕ್ಕೆ ಮಾರ್ಗದರ್ಶಕವಾಗಿತ್ತು ಎಂಬುದನ್ನು ನೆನಪಿಸಿಕೊಳ್ಳಬೇಕು. ವಿಶೇಷವಾಗಿ ಸ್ವಾಮಿ ವಿವೇಕಾನಂದರನ್ನು ನೆನಪಿಸಿಕೊಳ್ಳಬೇಕು. ಸ್ವಾಮಿ ವಿವೇಕಾನಂದರು ಈ ದೇಶದ ಜನಸಮುದಾಯದಲ್ಲಿ ಆಧ್ಯಾತ್ಮಿಕ ಶಕ್ತಿಯನ್ನು ಹೆಚ್ಚಿಸಲು ಪ್ರಯತ್ನವನ್ನು ಮಾಡಿ ತನ್ಮೂಲಕ ದೇಶದ ಜನರಲ್ಲಿ ಸ್ವಾಭಿಮಾನದ ಕಿಚ್ಚು ಬೆಳೆಯಲು ಕಾರಣರಾದರು.

ಸಾಮಾನ್ಯರಲ್ಲಿ ಸಾಮಾನ್ಯರಾಗಿದ್ದೂ ತಮ್ಮೊಳಗೆ ಒಂದು ಆದರ್ಶ ನಾಯಕತ್ವವನ್ನು ರೂಪಿಸಿಕೊಂಡು ಇಡೀ ರಾಷ್ಟ್ರಕ್ಕೆ, ಸಮಾಜಕ್ಕೆ ಸಮರ್ಥ ನೇತೃತ್ವವನ್ನು ಕೊಟ್ಟಿರುವ ಅನೇಕರನ್ನು ನಾವು ಸ್ಮರಿಸಿಕೊಳ್ಳಬಹುದು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಂಸ್ಥಾಪಕರಾದ ಡಾಕ್ಟರ್ ಕೇಶವ್ ಬಲಿರಾಮ್ ಹೆಡಗೆವಾರ್ ಅವರು ಸಾಮಾನ್ಯರಲ್ಲಿ ಸಾಮಾನ್ಯರಂತೆ ಇರುವ ಅನೇಕ ವಿದ್ಯಾರ್ಥಿಗಳನ್ನು, ಯುವಕರನ್ನು ಸಮಾಜದ ಬೇರೆ ಬೇರೆ ಕ್ಷೇತ್ರದ ಜನರನ್ನು ಜೊತೆ ಸೇರಿಸಿಕೊಂಡು ರಾಷ್ಟ್ರೀಯ ಸ್ವಯಂಸೇವಕ ಸಂಘ ಕಟ್ಟಿ ಬೆಳೆಸಿದರು. ಇವತ್ತು ದೇಶದ ಉದ್ದಗಲದಲ್ಲಿ ಎಲ್ಲ ಕ್ಷೇತ್ರಗಳಲ್ಲೂ ರಾಷ್ಟ್ರೀಯತೆಯ ವಿಷಯಕ್ಕೆ ಬದ್ಧತೆಯಿಂದ, ನಿಷ್ಠೆಯಿಂದ ಕೆಲಸ ಮಾಡುತ್ತಿರುವ ಸ್ವಯಂಸೇವಕರ ಒಂದು ಬಹಳ ದೊಡ್ಡ ದಂಡನ್ನು, ತಂಡವನ್ನು ನಾವು ಕಾಣುತ್ತಿದ್ದೇವೆ.

ಇಂಥವರ ಸಾಲಿನಲ್ಲಿ ನಿಲ್ಲಬಲ್ಲ ವ್ಯಕ್ತಿ, ನಮ್ಮವರೇ ಆದ ಶ್ರೀ ಅನಂತ ಕುಮಾರ್. ಅವರು ಹುಬ್ಬಳ್ಳಿಯಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದ ಸಂದರ್ಭದಲ್ಲಿ ವಿದ್ಯಾರ್ಥಿ ಪರಿಷತ್ತಿನ ಸಂಪರ್ಕಕ್ಕೆ ಬಂದು ಸ್ವಯಂಸೇವಕರಾಗಿ ಕೆಲಸ

ಪುಟ 5 ರಲ್ಲಿ ಮುಂದುವರೆದಿದೆ

## ಶ್ರದ್ಧಾಂಜಲಿ



ನಮ್ಮೆಲ್ಲರ ಆತ್ಮೀಯ ' ಜೀವಿ ' ಇನ್ನಿಲ್ಲ. ನಿಘಂಟು ತಜ್ಞರೆಂದೇ ಖ್ಯಾತರಾದ ಶತಾಯುಷಿ, ಪದ್ಮಶ್ರೀ ಪ್ರೊ. ಜಿ. ವೆಂಕಟಸುಬ್ಬಯ್ಯನವರು (೧೯೧೩ ಆಗಸ್ಟ್ ೨೩-೨೦೨೧ ಏಪ್ರಿಲ್ ೧೯) ತಮ್ಮ ೧೦೮ನೆಯ ವಯಸ್ಸಿನಲ್ಲಿ ನಿಧನರಾಗಿದ್ದಾರೆ. ತಮ್ಮ ಗುರು ಬಿ.ಎಂ.ಶ್ರೀಕಂಠಯ್ಯನವರ ಆಣತಿಯಂತೆ ಕನ್ನಡವನ್ನು ಬೆಳೆಸುವ ಹೊಣೆ ಹೊತ್ತು ಸುದೀರ್ಘಕಾಲದವರೆಗೆ ಭಾಷೆಯನ್ನು ಜತನವಾಗಿ ಕಾಪಾಡಿದ ಹಿರಿಯ ' ಜೀವಿ', ಕನ್ನಡ ಭಾಷೆ ಸಾಹಿತ್ಯಗಳಿಗೆ ಸಲ್ಲಿಸಿರುವ ಸೇವೆ ಅನನ್ಯವಾದುದು. ಜೀವಿಯವರು ಕಣ್ಮರೆಯಾಗಿದ್ದರೂ ' ಇಗೋ ಕನ್ನಡ'ದ ಮೂಲಕ ನಮ್ಮೆಲ್ಲರಿಗೂ ಸರಿಗನ್ನಡದ ಕಡೆಗೆ ಸದಾ ಮಾರ್ಗದರ್ಶನ ಮಾಡುತ್ತಿರುವುದರಲ್ಲಿ ಸಂಶಯವಿಲ್ಲ. ಅಗಲಿದ ಕನ್ನಡದ ಹಿರಿಯ ಜೀವಕ್ಕೆ ಅನಂತಕುಮಾರ್ ಪ್ರತಿಷ್ಠಾನದ ಪರವಾಗಿ ಹೃದಯ ತುಂಬಿದ ನಮನಗಳು. (ವಿಶೇಷ ಸಚಿತ್ರ ಲೇಖನ- ಪುಟ ೨)

# ನಾಡಿನ ಹಿರಿಯ “ಜೀವಿ” ಯೊಂದಿಗಿನ ಒಡನಾಟ ಚಿರಸ್ಮರಣೀಯ















ಖ್ಯಾತ ಸಂಶೋಧಕ, ನಿಘಂಟು ತಜ್ಞ, ನಾಡೋಜ, ಶತಾಯುಷಿ, ನಮ್ಮ ನಾಡಿನ ಹಿರಿಯ ಜೀವಿ ಯಾಗಿದ್ದ ಪ್ರೊ. ಜಿ ವೆಂಕಟಸುಬ್ಬಯ್ಯ ಅವರ ಜೊತೆಗಿನ ಒಡನಾಟ ಚಿರಸ್ಮರಣೀಯ. ಅಂತಹ ಮೇಧಾವಿಯ ಶತಮಾನೋತ್ಸವ ಕಾರ್ಯಕ್ರಮ ಸಮಿತಿಯ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ್ದು ನನ್ನ ಪುಣ್ಯ .



29/09/2012 ರಲ್ಲಿ ಪ್ರೋ. ಜಿ. ವಿ ವೆಂಕಟಸುಬ್ಬಯ್ಯನವರ ಜನ್ಮ ಶತಾಬ್ದಿಯ ಅಂಗವಾಗಿ ಜಯರಾಮ ಸೇವಾ ಮಂಡಳಿಯ ವತಿಯಿಂದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮ ಸಮಿತಿಯ ಅಧ್ಯಕ್ಷೆಯಾಗಿ ಕಾರ್ಯನಿರ್ವಹಿಸಿದ್ದು ನನ್ನ ಪುಣ್ಯ. ಆ ಸಂದರ್ಭದಲ್ಲಿ ಪ್ರೊ. ಜೀ ವಿ ಅವರೊಂದಿಗಿನ ಒಡನಾಟ ಬಹಳ ಅಪ್ಯಾಯಮಾನವಾಗಿತ್ತು. ಈ ಕಾರ್ಯಕ್ರಮಕ್ಕೆ ಲಾಲ್ ಕೃಷ್ಣ ಅಡ್ವಾಣೀ ಜಿ ಅವರನ್ನು ಕರೆತರಬೇಕು ಎನ್ನುವ ಸಮಿತಿಯ ಅಭಿಲಾಷೆಗೆ ಮುಂದಾಳತ್ವವನ್ನು ವಹಿಸಿದ್ದು ದಿವಂಗತ ಅನಂತಕುಮಾರ್ ಅವರು. ಅಡ್ವಾಣಿ ಜೀ ಅವರ ಮನೆಗೆ ಸಮಿತಿಯ ಸದಸ್ಯರನ್ನು ಕರೆದುಕೊಂಡು ಹೋಗಿ ದಿನಾಂಕವನ್ನು ನಿಗದಿಗೊಳಿಸಲಾಯಿತು. ಬೆಳಿಗ್ಗೆ ನಿಗದಿಯಾಗಿದ್ದ ಕಾರ್ಯಕ್ರಮಕ್ಕೆ ತುರ್ತು ಕಾರಣದಿಂದಾಗಿ ಅಡ್ವಾಣಿ ಜೀ ಅವರು ಬರಲಾಗಲಿಲ್ಲ. ಆದರೆ, ಆ ಕಾರ್ಯಕ್ರಮವನ್ನು ಮರುನಿಗದಿಗೊಳಿಸಿ ಸಂಜೆ 4 ಗಂಟೆಗೆ ನಡೆದ ಕಾರ್ಯಕ್ರಮದಲ್ಲಿ ಭಾಗಿಯಾದರು.

ಇಂತಹ ಮೇಧಾವಿಯ ಜನ್ಮ ಶತಮಾನೋತ್ಸವ ಕಾರ್ಯಕ್ರಮಕ್ಕೆ ಸಿದ್ದತೆಯೂ ಸಣ್ಣದಾಗಿರಲಿಲ್ಲ. ಸುಮಾರು 2 ವರ್ಷಗಳ ಕಾಲ ಈ ಕಾರ್ಯಕ್ರಮದ ಸಿದ್ದತೆಯನ್ನು ನಡೆಸಲಾಯಿತು. ಆ ಸಂದರ್ಭದಲ್ಲಿ ಸಮಿತಿಯ ವತಿಯಿಂದ ನಡೆದ ಎಲ್ಲಾ ಪೂರ್ವಭಾವಿ ಕಾರ್ಯಕ್ರಮಗಳು ಹಾಗೂ ಸಭೆಗಳಲ್ಲಿ ಭಾಗವಹಿಸಿದ್ದೆ. ಈ ಸಮಯದಲ್ಲಿ ಅವರೊಂದಿಗೆ ಒಡನಾಟ ಹೆಚ್ಚಾಯಿತು.

ಪ್ರೋ ಜಿ ವೆಂಕಟಸುಬ್ಬಯ್ಯ ಅವರ ಜನ್ಮ ಶತಮಾನೋತ್ಸವ ಕಾರ್ಯಕ್ರಮಕ್ಕೆ ಅದಮ್ಯ ಚೇತನ ಸಂಸ್ಥೆಯ ವತಿಯಿಂದ ವಿಶೇಷ ಗೋಡೆ ವಾರಪತ್ರಿಕೆಯನ್ನು ಹೊರತರಲಾಗಿತ್ತು. ಈ ವಾರ ಪತ್ರಿಕೆಯಲ್ಲಿ ಅವರ ಜೀವನ, ಸಾಧನೆಯ ಬಗ್ಗೆ ವಿವರಗಳನ್ನು ನೀಡಲಾಗಿತ್ತು. ಅಲ್ಲದೆ, ಈ ಪತ್ರಿಕೆಯನ್ನು ಶಾಲೆಗಳಿಗೂ ಕಳುಹಿಸಿಕೊಡಲಾಗಿತ್ತು.

ಅವರ 101 ನೇ ವಯಸ್ಸಿನಲ್ಲಿ ಅವರ ಆರು ಕೃತಿಗಳನ್ನು ನಾವು ಆಯೋಜಿಸಿದ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಿದ್ದು ವಿಶೇಷ.

ಅದಮ್ಯ ಚೇತನ ವತಿಯಿಂದ ಪ್ರಾರಂಭಿಸಲಾದ ಸೇವಾ ಉತ್ಸವದ ಮೊದಲ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದು ಪ್ರೊ. ವೆಂಕಟಸುಬ್ಬಯ್ಯನವರು. ಆ ಕಾರ್ಯಕ್ರಮದಲ್ಲಿ 10 ಸಾವಿರ ಜನರು ವಂದೇ ಮಾತರಂ ಹಾಡಿದ್ದು ವಿಶೇಷ.

ಪ್ರೊ. ಜಿ ವೆಂಕಟಸುಬ್ಬಯ್ಯನವರೊಂದಿಗೆ ದಿವಂಗತ ಅನಂತಕುಮಾರ್ ಹಾಗೂ ನಮ್ಮ ಒಡನಾಟ ಬಹಳ ಹೆಚ್ಚೇ ಇತ್ತು. ಅವರು ನಮ್ಮ ಬಹುತೇಕ ಎಲ್ಲಾ ಸೇವಾ ಉತ್ಸವಗಳಲ್ಲೂ ಭಾಗವಹಿಸಿದ್ದಾರೆ. ಅಲ್ಲದೆ, ಅನಂತಕುಮಾರ್ ಅವರ ಮೊದಲ ಪುಸ್ತಕ ಅನಂತ ತಾ ಅನಂತವಾಗಿ ಹಾಗೂ ಅದಮ್ಯ ಚೇತನದ ಪುಸ್ತಕಕ್ಕೂ ಅವರು ಮುನ್ನುಡಿ ಬರೆದಿದ್ದಾರೆ. ನಮ್ಮ ಹಲವಾರು ಕಾರ್ಯಕ್ರಮಗಳಲ್ಲೂ ಭಾಗಿಯಾಗಿ ಮಾರ್ಗದರ್ಶನ ನೀಡಿದ್ದಾರೆ. ತಮ್ಮ 101 ನೇ ವರ್ಷದ ಇಳಿ ವಯಸ್ಸಿನಲ್ಲೂ ನಮ್ಮ ಮಗಳ ಮದುವೆಗೆ ಆಗಮಿಸಿ ವಧೂ ವರರನ್ನು ಆಶೀರ್ವದಿಸಿದ್ದಾರೆ.

ಪ್ರೊ.ಜಿವಿ ಅವರಿಗೆ ಮಾವಿನ ಹಣ್ಣಿನ ಬಗ್ಗೆ ಬಹಳ ಒಲವು ಇತ್ತು. ಪ್ರತಿ ವರ್ಷ ಹುಬ್ಬಳ್ಳಿ ಭಾಗದ ಅತ್ಯುತ್ತಮ ಮಾವಿನ ಹಣ್ಣುಗಳನ್ನು ಅವರಿಗೆ ಕಳುಹಿಸಿಕೊಡುತ್ತಿದ್ದೆವು. ಕರೋನಾ ಸಾಂಕ್ರಾಮಿಕ ಕಾರಣ ಕಳೆದ ವರ್ಷ ಕಳುಹಿಸಿಕೊಡಲಾಗಿರಲಿಲ್ಲ, ಈ ವರ್ಷ ಹಣ್ಣು ಕಳುಹಿಸಿಕೊಡುವುದಕ್ಕೆ ಅವರೇ ಇಲ್ಲ ಎಂದು ದು:ಖವೆನಿಸುತ್ತಿದೆ.

ಬಹಳ ಮೃದು ಸ್ವಭಾವದವರಾಗಿದ್ದ ಅವರು, ತಮ್ಮ ಕೊನೆಯ ದಿನಗಳ ವರೆಗೂ ಬೌದ್ಧಿಕ ಹಾಗೂ ಭಾವನಾತ್ಮಕ ವಿಚಾರ ಲಹರಿಗಳನ್ನು ಹಿಡಿತದಲ್ಲಿಟ್ಟುಕೊಂಡಿದ್ದರು. ಶಾಂತಸ್ವಭಾವದಿಂದ ತಮ್ಮ ಸುತ್ತಮತ್ತಲಿನ ವಿದ್ಯಮಾನಗಳನ್ನು ತಿಳಿದುಕೊಂಡು ಅದಕ್ಕೆ ಸಮಚಿತ್ತದಿಂದ ಪ್ರತಿಕ್ರಿಯಿಸುತ್ತಿದ್ದರು. ಈ ಮೂಲಕ ಸಮಚಿತ್ತರಾಗಿರುವುದು ಎಂದರೆ ಏನು ಎಂಬುದನ್ನು ನಮಗೆ ತೋರಿಸಿಕೊಟ್ಟಿದ್ದಾರೆ. ಭಾರತೀಯ ಸಂಸ್ಕೃತಿ ಬಗ್ಗೆ ಅವರಿಗೆ ವಿಶೇಷ ಆಸಕ್ತಿ ಇತ್ತು.

ಇಂತಹ ಮಹಾನ್ ಚೇತನ ದ ಅಗಲಿಕೆಯಿಂದ ನಾಡಿನ ಸಾಂಸ್ಕೃತಿಕ ಜಗತ್ತಿಗೆ ಬಹಳ ನಷ್ಟ ಆಗಿದೆ. ಇಗೋ ಕನ್ನಡದ ಮೂಲಕ ಕನ್ನಡ ಶಬ್ದಗಳ ಅರ್ಥ ಸಂಪತ್ತನ್ನು ನಾಡಿಗೆ ತಲುಪಿಸಿದ ಅವರ ಆತ್ಮಕ್ಕೆ ಚಿರ ಶಾಂತಿ ದೊರಕಲಿ ಎಂದು ಪ್ರಾರ್ಥಿಸುತ್ತೇನೆ.

**- ಡಾ. ತೇಜಸ್ವಿನಿ ಅನಂತಕುಮಾರ್**

ನಾನು ಕಂಡಂತೆ



ಅನಂತಕುಮಾರ್

# ಕೈ ತುತ್ತು ತಿನ್ನಿಸಿದ ಅಣ್ಣ

ಶ್ರೀ ಪ್ರಹ್ಲಾದ ಜೋಷಿ
ಸಂಸದೀಯ ವ್ಯವಹಾರಗಳ ಸಚಿವರು, ಭಾರತ ಸರ್ಕಾರ

ಅನಂತಕುಮಾರರ ತಂದೆ ನಾರಾಯಣ ಶಾಸ್ತ್ರಿ ಹಾಗೂ ನಮ್ಮ ತಂದೆ ವೆಂಕಟೇಶ್ ಜೋಷಿ ಇಬ್ಬರೂ ಹುಬ್ಬಳ್ಳಿಯಲ್ಲಿ ರೈಲ್ವೆ ಇಲಾಖೆಯಲ್ಲಿ ಸಹೋದ್ಯೋಗಿಗಳಾಗಿದ್ದವರು. ಎಂ. ಟಿ. ಎಸ್. ಕಾಲೊನಿಯಲ್ಲಿ ಇಬ್ಬರ ಮನೆಗಳೂ ಅಕ್ಕಪಕ್ಕದಲ್ಲೇ ಇದ್ದುವು. ಹೀಗಾಗಿ ಅನಂತಕುಮಾರ್ ಮತ್ತು ನಾನು ಒಂದೇ ಕುಟುಂಬದ ಅಣ್ಣ- ತಮ್ಮರಂತೆ ಕೂಡಿ ನಲಿಯುತ್ತಿದ್ದೆವು.




ಅನಂತ ಕುಮಾರ ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಶಾಲೆಗೆ ಸೇರಿಕೊಂಡಿದ್ದರೆ, ನಾನು ನ್ಯೂ ಇಂಗ್ಲಿಷ್ ಸ್ಕೂಲಿಗೆ ಸೇರಿದ್ದೆ. ಅವರು ನನಗಿಂತ ನಾಲ್ಕು ವರ್ಷ ಹಿರಿಯರು; ನನ್ನನ್ನು, ಸ್ವಂತ ತಮ್ಮನಂತೆ ನೋಡಿಕೊಳ್ಳುತ್ತಿದ್ದರು. ನನಗೆ ಮೂವರು ಸಹೋದರರಿದ್ದರೂ ಅನಂತಕುಮಾರ ನನಗೆ ಎಲ್ಲರಿಗಿಂತ ಹಿರಿಯರಾಗಿ ನಾಲ್ಕನೇ ಸಹೋದರ ಎನ್ನುವ ಭಾವನೆ ಮೂಡುತ್ತಿತ್ತು. ಅವರು ನಮ್ಮ ಕುಟುಂಬದ ಅವಿಭಾಜ್ಯ ಅಂಗವೇ ಆಗಿದ್ದು ಮನೆಯಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ರಮಕ್ಕೂ ತಪ್ಪದೇ ಹಾಜರಾಗುತ್ತಿದ್ದರು. ಅವರ ಬಳಿಯಿದ್ದ ಸೈಕಲ್ ಮೇಲೆ ನನ್ನನ್ನೂ ಕುಳ್ಳಿರಿಸಿಕೊಂಡು ಹೊರಡುತ್ತಿದ್ದರು. ಮುಂದೆ , ಪಕ್ಷದ ಸಂಘಟನೆಗಾಗಿ ನಾವಿಬ್ಬರೂ ಊರೂರು ತಿರುಗುತ್ತಿದ್ದೆವು. ಹಸಿವಾದಾಗ ಅನಂತಕುಮಾರ್ ನನ್ನನ್ನು ತಮ್ಮ ಮನೆಗೆ ಕರೆದೊಯ್ಯುತ್ತಿದ್ದರು. ಅವರ ಅಮ್ಮ ಮಾಡಿದ ರೊಟ್ಟಿ ತಿಂದು ನೀರು ಕುಡಿದು ಸಂತೃಪ್ತಿ ಪಡುತ್ತಿದ್ದೆವು. ಅವರ ತಾಯಿ ಗಿರಿಜಾ ನನ್ನನ್ನು ಸಹ ಸ್ವಂತ ಮಗನಂತೆಯೇ ಕಂಡು ಅನೇಕ ಬಾರಿ ಕೈ ತುತ್ತು ತಿನ್ನಿಸಿದ್ದರು.

ಓದುತ್ತಿರುವಾಗಲೇ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರಾಗಿ ಶಿಸ್ತಿಗೆ ಶರಣಾದ ಅನಂತಕುಮಾರ ಆಗಲೇ ಬಿಜೆಪಿ ಬಲವರ್ಧನೆಗೆ ಶ್ರಮಿಸಿದ್ದರು. ಕೇಂದ್ರ ಹಾಗು ರಾಜ್ಯ ರಾಜಕಾರಣದಲ್ಲಿ ತನ್ನದೇ ಆದ ಹಿಡಿತ ಇಟ್ಟುಕೊಂಡಿದ್ದ ಅವರು, ಸೂಕ್ತ ಸಮಯ ಬಂದಾಗ ರಾಜಕೀಯದಲ್ಲಿ ನನಗೊಂದು ಅವಕಾಶ ಸೃಷ್ಟಿಸಿಕೊಟ್ಟರು. ಅವರ ಮಾರ್ಗದರ್ಶನ ಹಾಗೂ ಪ್ರೋತ್ಸಾಹವೇ ನನ್ನ ರಾಜಕೀಯ ಜೀವನಕ್ಕೆ ಕಾರಣವಾಗಿದೆ. ಕೇಂದ್ರದಲ್ಲಿಯೂ ಪ್ರಬಲರಾಗಿದ್ದ ಅವರು, ಯಾವುದೇ ಕೆಲಸವಾಗಬೇಕೆಂದರೂ ಸೂಕ್ತ ಸಲಹೆ-ಸೂಚನೆ ನೀಡುತ್ತಿದ್ದರು. ವಾರಕ್ಕೊಂದು ಬಾರಿ ರಾಜ್ಯದ ಕೇಂದ್ರ ಸಚಿವರ, ಸಂಸದರ ಜತೆ ಸಭೆ, ಮಾತುಕತೆ ನಡೆಸುವ ಮೂಲಕ ರಾಜ್ಯದ ಅಭಿವೃದ್ಧಿ ಕುರಿತು ವಿಚಾರ ಮಾಡುತ್ತಿದ್ದರು.

ಅನಂತಕುಮಾರ್ ಅವರು ತಮ್ಮ ಜೀವನದುದ್ದಕ್ಕೂ ಸಹೃದಯತೆ, ಉದಾರತೆಯನ್ನು ಮೆರೆದ ಓರ್ವ ನಿಷ್ಕಳಂಕ, ಪ್ರಾಮಾಣಿಕ ರಾಜಕಾರಣಿ. ಇವತ್ತಿನ ರಾಜಕಾರಣದಲ್ಲಿ ಇರುವವರಿಗೆ ಆರೋಪಗಳು ಅತ್ಯಂತ ಸಹಜ ಎಂಬ ಮಟ್ಟಿಗಿನ ವ್ಯವಸ್ಥೆ ಬಂದುಬಿಟ್ಟಿದೆ. ಆದರೆ, ಅನಂತಕುಮಾರ್ ಅವರು ಯಾವುದೇ ಆರೋಪ ಬಾರದೇ ಇರುವ ರೀತಿಯಲ್ಲಿ ಜೀವನ ನಡೆಸಿದರು. ಅಷ್ಟೇ ಉದಾರತೆ ಮೆರೆದರು. ಅವರಿಗೆ ಕೆಟ್ಟದ್ದನ್ನು ಬಯಸಿದವರು, ಅವರ ವಿರುದ್ಧ ಪತ್ರಿಕೆಗಳಲ್ಲಿ ಕೆಟ್ಟದಾಗಿ ಬರೆದವರಿಗೂ ಅವರು ಒಳ್ಳೆಯದನ್ನೇ ಬಯಸಿದರು. ಒಮ್ಮೆ ಲಂಕೇಶ್ ಅವರನ್ನು ಯಾವುದೋ ಕೇಸಿನಲ್ಲಿ ಮುಂಬೈ ಪೊಲೀಸರು ಅರೆಸ್ಟ್ ಮಾಡಿ ಕರೆದೊಯ್ದರು. ಆಗ ಅವರ ಮಗಳು ಅನಂತಕುಮಾರ್ ಅವರಲ್ಲಿ ಬಂದು ಸಹಾಯ ಯಾಚಿಸಿದರು. ಕೂಡಲೇ ಅನಂತಕುಮಾರ್ ಮುಂಬೈನಲ್ಲಿದ್ದ ಪರಿಚಿತರನ್ನು ಸಂಪರ್ಕಿಸಿ ಆ ಮೂಲಕ ಲಂಕೇಶರನ್ನು ಬಿಡಿಸಿದರು. ಲಂಕೇಶರನ್ನು ಮುಂಬೈನಿಂದ ವಿಮಾನದ ಮೂಲಕ ಬೆಂಗಳೂರಿಗೆ ಕಳುಹಿಸಲಾಯಿತು. ಆದರೆ, ಅದೇ ವಾರದಲ್ಲಿ ಲಂಕೇಶರು ಅನಂತಕುಮಾರ್ ವಿರುದ್ಧ ಪತ್ರಿಕೆಯಲ್ಲಿ ಕೆಟ್ಟದಾಗಿ ಬರೆದಿದ್ದರು. ಅನಂತ್ ಅವರು ಆ ಬಗ್ಗೆ ತಲೆಕೆಡಿಸಿಕೊಳ್ಳಲೇ ಇಲ್ಲ. " ನನ್ನ ಕರ್ತವ್ಯ ನಾನು ಮಾಡಿದ್ದೇನೆ, ಅವರು ಏನಾದರೂ ಮಾಡಿಕೊಳ್ಳಲಿ" ಎಂದು ನಿರ್ಲಿಪ್ತರಾಗಿ ಇರುತ್ತಿದ್ದರು.

ಊಟೋಪಚಾರದಲ್ಲಿ ಅನಂತಕುಮಾರರದ್ದು ವಿಶೇಷ ಕಾಳಜಿ. ದೆಹಲಿಯಲ್ಲಿ ಸಹ ಅನೇಕರು, "ಕ್ಯಾ ಅನಂತ್ ಜೀ ಇಧರ್ ಹೈ, ಖಾನೆ ಕೇ ಲಿಯೇ ಚಿಂತಾ ನಹೀ" ಎನ್ನುತ್ತಿದ್ದರು. ಇತ್ತೀಚೆಗೆ ರಾಜ್ಯದಲ್ಲಿ ವಿಧಾನ ಸಭೆಗೆ ನಡೆದ ಚುನಾವಣೆಯ ವೇಳೆ ರಾಜನಾಥ್ ಸಿಂಗ್ ಪ್ರಚಾರಕ್ಕೆ ಬಂದಿದ್ದರು. ಅವರ ಸಲುವಾಗಿ ಅನಂತಕುಮಾರ್ ಅವರು ವಿಶೇಷ ಕಾಳಜಿ ವಹಿಸಿ ಊಟೋಪಚಾರದ ವ್ಯವಸ್ಥೆ ಮಾಡಿದ್ದರು. ಅದನ್ನು ಕಂಡ ರಾಜನಾಥ್ ಸಿಂಗ್ ಅವರು, ಅನಂತಕುಮಾರ್ ಇದ್ದಲ್ಲಿ ತಿನ್ನಲು ಇದ್ದೇ ಇರುತ್ತದೆ ಎಂಬುದು ನನಗೆ ಗೊತ್ತು, ಅದಕ್ಕೇ ನಾನು ಸ್ವಲ್ಪವೇ ಉಪಾಹಾರ ತಿಂದು ಬಂದಿದ್ದೆ ಎಂದರು. ಕೇವಲ ದೊಡ್ಡ ವ್ಯಕ್ತಿಗಳಿಗೆ ಮಾತ್ರವೇ ಆಗಿರಲಿಲ್ಲ, ಸಾಮಾನ್ಯರ ಬಗ್ಗೆಯೂ ಅವರಿಗೆ ಅದೇ ಕಾಳಜಿ ಇತ್ತು. ಇದೇ ಪುಟ 6 ರಲ್ಲಿ ಮುಂದುವರೆದಿದೆ

# ಸಮಾಜಸೇವೆಯ ಅನಂತ ಅವಕಾಶ- ಬಾನುಲಿ ಸರಣಿ



ಸಮಾಜಸೇವೆಯ ಅನಂತ ಅವಕಾಶ ಬಾನುಲಿಸರಣಿಯ ಕಾರ್ಯಕ್ರಮ ನಿರ್ವಾಹಕರಾದ ಶ್ರೀ ದಿವಾಕರ ಹೆಗಡೆಯವರು ಶ್ರೀಮತಿ ತೇಜಸ್ವಿನಿ ಅನಂತಕುಮಾರರನ್ನು ಸಂದರ್ಶಿಸುತ್ತಿರುವುದು

ಅನಂತಕುಮಾರ್ ಪ್ರತಿಷ್ಠಾನ ಹಾಗೂ ಅದಮ್ಯ ಚೇತನ ಸಂಸ್ಥೆಗಳ ಪ್ರಾಯೋಜಕತ್ವದಲ್ಲಿ ಮೈಸೂರು ಆಕಾಶವಾಣಿಯಿಂದ ವಾರಕ್ಕೊಮ್ಮೆ ಬಾನುಲಿ ಸರಣಿ ಕಾರ್ಯಕ್ರಮವೊಂದು ಪ್ರಸಾರಗೊಳ್ಳುತ್ತಿದೆ. ಸಮಾಜಸೇವೆಯ ಅನಂತ ಅವಕಾಶ ಎಂಬ ಶೀರ್ಷಿಕೆಯ ಈ ಸರಣಿಯು ಹದಿಮೂರು ಭಾಗಗಳಲ್ಲಿ ಬಿತ್ತರವಾಗಲಿದೆ. ೨೯ ಮಾರ್ಚ್ ೨೦೨೧ ರಿಂದ ಮೊದಲುಗೊಂಡು ಪ್ರತಿ ಸೋಮವಾರ ಬೆಳಗ್ಗೆ ೯.೦೫ ಕ್ಕೆ ಮೈಸೂರು ಆಕಾಶವಾಣಿ (ಎಫ್. ಎಂ. ೧೦೦.೬ ತರಂಗಾಂತರ) ಮೂಲಕ ಈ ಕಾರ್ಯಕ್ರಮವನ್ನು ಆಲಿಸಬಹುದು. ರಾಜಕೀಯ ಮತ್ತು ಸಮಾಜಸೇವೆ, ಮಹಿಳಾ ಸಬಲೀಕರಣ, ನಾಯಕತ್ವ ನಿರ್ಮಾಣ, ದೇಶದ ಪ್ರಗತಿಯಲ್ಲಿ ಆಧುನಿಕ ಸಂಪರ್ಕಯೋಜನೆಗಳ ಪಾತ್ರ, ಕೃಷಿ ಮತ್ತು ರಸಗೊಬ್ಬರ, ಅನ್ನ-ಅಕ್ಷರ-ಆರೋಗ್ಯ, ನಾಡು-ನುಡಿ-ಅಭಿಮಾನ, ಪರ್ಯಾಯ ಇಂಧನ ಹಾಗೂ ಶಕ್ತಿಮೂಲಗಳು, ಜನ ಔಷಧಿ, ಸಂಘಟನೆಯ ಸಾಮರ್ಥ್ಯ ಮತ್ತು ಮಹತ್ವ, ಅರಣ್ಯ-ಪರಿಸರ, ಯುವಶಕ್ತಿಯ ಸದ್ಬಳಕೆ , ನಾಡಿನ ಏಳಿಗೆಯಲ್ಲಿ ಸ್ವಯಂಸೇವಾ ಸಂಘಟನೆಗಳ ಪಾತ್ರ ಎಂಬಿವೇ ಮೊದಲಾದ ವಿಷಯಗಳನ್ನು ಕುರಿತು ಪರಿಣತರ ಅಭಿಪ್ರಾಯಗಳನ್ನೊಳಗೊಂಡ ಈ ಕಾರ್ಯಕ್ರಮಗಳು ತಲಾ ಹದಿನೈದು ನಿಮಿಷಗಳ ಅವಧಿಯಲ್ಲಿ ಮೂಡಿ ಬರಲಿವೆ. ಕಾರ್ಯಕ್ರಮದ ಕೊನೆಯಲ್ಲಿ ಕೇಳಲಾಗುವ ಪ್ರಶ್ನೆಗಳಿಗೆ ಉತ್ತರಿಸಿ ಬಹುಮಾನ ಗೆಲ್ಲುವ ಅವಕಾಶವೂ ಉಂಟು. ಈ ಕಾರ್ಯಕ್ರಮದ ಸರಣಿಯನ್ನು ಉದ್ಘಾಟಿಸಿ ಕರ್ನಾಟಕ ವಿಧಾನಸಭೆಯ ಸನ್ಮಾನ್ಯ ಸಭಾಪತಿಗಳಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮಾಡಿದ ಭಾಷಣವನ್ನು ಅನಂತಪಥದ ಈ ಸಂಚಿಕೆಯಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಈ ಬಾನುಲಿ ಸರಣಿಯಲ್ಲಿ ಭಾಗವಹಿಸಿರುವ ವಿಷಯ ಪರಿಣತರ ಅಭಿಪ್ರಾಯಗಳನ್ನು ಮುಂದಿನ ಸಂಚಿಕೆಗಳಲ್ಲಿ ನೀವು ಓದಬಹುದು.

# ಬೇವು ಮತ್ತು ಯೂರಿಯಾ

ಪುಟ 1 ರಿಂದ ಇದಕ್ಕೆ ಕಾರಣಗಳು ಹಲವಾರು. ರಸಗೊಬ್ಬರವಾಗಿ ಕೃಷಿಕ್ಷೇತ್ರದಲ್ಲಿ ಮಾತ್ರ ಯೂರಿಯಾ ಬಳಕೆಯಾಗುವುದಲ್ಲ, ಅದನ್ನು ಅನೇಕ ವಾಣಿಜ್ಯಿಕ ಉತ್ಪನ್ನಗಳ ತಯಾರಿಕೆಯಲ್ಲಿಯೂ ಬಳಸುತ್ತಾರೆ. ಹಾಲಿಗೆ ಕಲಬೆರಕೆ ಮಾಡಲು, ಕೃತಕ ಹಾಲು ತಯಾರಿಸಲು ಯೂರಿಯಾ ಬಳಸುತ್ತಾರೆ. 2020 ರಲ್ಲಿ ನಮ್ಮ ದೇಶದಲ್ಲಿ ಒಟ್ಟು ಯೂರಿಯಾದ ಬೇಡಿಕೆ 336 ಲಕ್ಷ ಟನ್ನುಗಳಾಗಿದ್ದರೆ ಉತ್ಪಾದನೆಯ ಪ್ರಮಾಣ ಸುಮಾರು 240 ಲಕ್ಷ ಟನ್ನುಗಳು. ಅಂದರೆ ಸುಮಾರು ಶೇಕಡಾ 27ರಷ್ಟು ಯೂರಿಯಾವನ್ನು ನಾವು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದೇವೆ. ಕೊರತೆಯಿರುವಲ್ಲಿ ಕಾಳಸಂತೆಯೂ ಇರುವುದು ಸಹಜ. ಇದರ ಜೊತೆಗೆ ಭಾರತ ಸರಕಾರವು ಯೂರಿಯಾ ರಸಗೊಬ್ಬರದ ಮೇಲೆ ವಾರ್ಷಿಕವಾಗಿ ಸುಮಾರು 55000 ಕೋಟಿ ರೂಪಾಯಿಗಳ ಸಹಾಯಧನವನ್ನೂ ನೀಡುತ್ತಿದೆ. ಲಾಭಕೋರರು ಸರಕಾರದ ಸಹಾಯಧನ ಪಡೆದ ಯೂರಿಯಾವನ್ನು ಇತರ ಉದ್ದಿಮೆಗಳಿಗೆ ಮಾರಿಕೊಳ್ಳುವ ಸಂಭವವೂ ಇದೆ. ಹೀಗಾಗಿ ಯೂರಿಯಾ ಕೊರತೆಯ ಸೃಷ್ಟಿಯು ಅಪ್ರಾಮಾಣಿಕ ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ, ಉದ್ದಿಮೆದಾರರಿಗೆ ಅಕ್ರಮ ಮಾರ್ಗದಲ್ಲಿ ಹಣಗಳಿಸಲು ದಾರಿ ಮಾಡಿಕೊಡುವಂತಾಯಿತು.

2014ರ ಮೇ ತಿಂಗಳಲ್ಲಿ ಐತಿಹಾಸಿಕ ಮಹಾ ಚುನಾವಣೆ ನಡೆಯಿತು. ಅದಕ್ಕೆ ಮೊದಲಿನ ಎರಡು ತಿಂಗಳಲ್ಲಿಯೇ ಕೇಂದ್ರಸರಕಾರವು 149ಲಕ್ಷ ಟನ್ ಯೂರಿಯಾವನ್ನು ಆಮದು ಮಾಡಿಕೊಂಡಿತ್ತು. ಹಾಗಿದ್ದೂ ದೇಶದಲ್ಲಿ ರಸಗೊಬ್ಬರದ ಅಭಾವ ಉಲ್ಬಣಗೊಂಡು ರೈತರು ಪ್ರತಿಭಟನೆಗಿಳಿದಿದ್ದರು. 2005 ರಿಂದ 2014ರ ವರೆಗೆ ರಸಗೊಬ್ಬರದ ಅಭಾವ, ರೈತರ ಪ್ರತಿಭಟನೆ, ಗೋಲೀಬಾರ್ ಮುಂತಾದ ವಿಷಯಗಳೆಲ್ಲ ಸಾಮಾನ್ಯ ವಾರ್ಷಿಕ ಕಟ್ಟಲೆ ಎಂಬಂತಾಗಿತ್ತು. ಈ ರಸಗೊಬ್ಬರದ ಅಭಾವವನ್ನು ಚುನಾವಣೆಯ ವಿಷಯವನ್ನಾಗಿಸಿ ರಾಷ್ಟ್ರಮಟ್ಟದಲ್ಲಿ ಶ್ರೀ ನರೇಂದ್ರ ಮೋದಿ ಮತ್ತು ರಾಜ್ಯಮಟ್ಟದಲ್ಲಿ ಶ್ರೀ ಅನಂತಕುಮಾರರು ಪ್ರಚಾರ ಮಾಡಿದ್ದರು. ಕೃಷಿಪ್ರಧಾನ ಪ್ರದೇಶವಾದ ಹುಬ್ಬಳ್ಳಿಯಲ್ಲಿ ತಮ್ಮ ಆರಂಭಿಕ ಜೀವನವನ್ನು ಕಳೆದಿದ್ದ ಅನಂತಕುಮಾರರಿಗೆ ರೈತರ ಬವಣೆಯ ನೇರ ಪರಿಚಯವಿತ್ತು. ಹೀಗಾಗಿ ಈ ಕುರಿತು ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವ ತುಡಿತವೂ ಅವರಲ್ಲಿತ್ತು.

ಅಂತಹ ಅವಕಾಶ ಅವರನ್ನು ಹುಡುಕಿಕೊಂಡು ಬಂದಿತು. 2014ರಲ್ಲಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತೀಯ ಜನತಾ ಪಕ್ಷ ಅಭೂತಪೂರ್ವ ಜಯಗಳಿಸಿ ದೇಶದ ಆಡಳಿತದ ಚುಕ್ಕಾಣಿ ಹಿಡಿಯಿತು. ಅವರ ಸಂಪುಟದಲ್ಲಿ ಶ್ರೀ ಅನಂತಕುಮಾರರು ರಾಸಾಯನಿಕ ಮತ್ತು ರಸಗೊಬ್ಬರ ಖಾತೆಯ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು. ಸ್ವಾಭಾವಿಕವಾಗಿ ಅವರ ಆದ್ಯತೆಯು ದೇಶದಲ್ಲಿ ರಸಗೊಬ್ಬರಗಳ ಕೊರತೆಯನ್ನು ನಿವಾರಿಸಿ ರೈತರ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುವುದಾಯಿತು.

**ಬೇವು ಲೇಪನ ಕಡ್ಡಾಯ**

ವಾಜಪೇಯಿ ಸರಕಾರದ ಅವಧಿಯಲ್ಲಿ ಅಂದರೆ 2002 ರಲ್ಲಿ ನ್ಯಾಷನಲ್ ಫರ್ಟಿಲೈಸರ್ ಲಿಮಿಟೆಡ್ ಸಂಸ್ಥೆಯು ಬೇವು ಲೇಪಿತ ಯೂರಿಯಾವನ್ನು ಅಭಿವೃದ್ಧಿ ಪಡಿಸಿತ್ತು. 2008 ರಲ್ಲಿ ಪಾಣಿಪತ್ ಘಟಕದಲ್ಲಿ ನಿಗದಿತ ಗುಣ ಮಟ್ಟದ ಬೇವು ಲೇಪಿತ ಯೂರಿಯಾ ಉತ್ಪಾದನೆ ಪ್ರಾರಂಭವಾಯಿತು. ಆಗ ಒಟ್ಟು ಸಾಮರ್ಥ್ಯದ ಶೇ 20 ರಷ್ಟು ಬೇವು ಲೇಪಿತ ಯೂರಿಯಾ ಉತ್ಪಾದನೆ ಮಾಡಬೇಕೆಂದು ನಿರ್ಧರಿಸಿದರೂ ಅದನ್ನು ಕಡ್ಡಾಯ ಮಾಡಿರಲಿಲ್ಲ. ಮುಂದೆ 2010 ರಲ್ಲಿ ಆ ಪ್ರಮಾಣವನ್ನು ಶೇ 35 ಕ್ಕೆ ಏರಿಸಲಾಯಿತು. ಆದರೆ ಯಾವ ಉತ್ಪಾದಕರೂ ಈ ನಿರ್ಧಾರವನ್ನು ಪಾಲಿಸಲಿಲ್ಲ. ಹೀಗಾಗಿ ಸಮಸ್ಯೆ ಸಮಸ್ಯೆಯಾಗಿಯೇ ಉಳಿಯಿತು. 2014 ರಲ್ಲಿ ಅಧಿಕಾರ ವಹಿಸಿಕೊಂಡ ಅನಂತಕುಮಾರರು ಈ ಪ್ರಮಾಣವನ್ನು ಶೇ 75 ಕ್ಕೆ ಏರಿಸಿದ್ದಲ್ಲದೆ ಅದನ್ನು ಕಡ್ಡಾಯ ಮಾಡಿದರು. ಅಧಿಕಾರಕ್ಕೇರಿದ ಅನತಿಕಾಲದಲ್ಲಿಯೇ ಅವರು ಹೊಸ ರಾಷ್ಟ್ರೀಯ ಯೂರಿಯಾ ಪಾಲಿಸಿಯನ್ನು ದಿನಾಂಕ 25/05/2015 ರಿಂದ ಜಾರಿಗೆ ತಂದರು. ಅದರಂತೆ 01/09/2015 ರಿಂದ ದೇಶದಲ್ಲಿ ಸಂಪೂರ್ಣವಾಗಿ ಬೇವುಲೇಪಿತ ಯೂರಿಯಾ ಉತ್ಪಾದನೆಯನ್ನು ಕಡ್ಡಾಯಗೊಳಿಸಲಾಯಿತು.ಇಂದು ದೇಶದಲ್ಲಿ ಉತ್ಪಾದನೆಯಾಗುವ ಶೇ 100 ರಷ್ಟು ರಸಗೊಬ್ಬರ ದರ್ಜೆಯ ಯೂರಿಯಾ ಬೇವುಲೇಪಿತವೇ ಆಗಿದೆ.

ಇದರ ಹಲವಾರು ಪ್ರಯೋಜನಗಳು ಕಂಡು ಬಂದಿವೆ. ಬೇವು ಲೇಪಿತ ಯೂರಿಯಾ ಹೆಚ್ಚು ಪರಿಣಾಮಕಾರಿಯಾಗಿರುವುದರಿಂದ ಕಡಿಮೆ ಯೂರಿಯಾ ಬಳಸಿ ಅಧಿಕ ಇಳುವರಿ ಪಡೆಯಬಹುದಾಗಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು ಕೃಷ್ಯುತ್ಪನ್ನದಲ್ಲಿ ಹೆಚ್ಚಳವಾಗಿದ್ದರೂ ಯೂರಿಯಾದ ಬೇಡಿಕೆ ಒಂದೇ ಪ್ರಮಾಣದಲ್ಲಿರುವುದು ಇದಕ್ಕೆ ಸಾಕ್ಷಿ.

ಸಾರಜನಕವು ನೀರಿನಲ್ಲಿ ಮಿಶ್ರಣಗೊಂಡು ಅಂತರ್ಜಲ ಕಲುಷಿತವಾಗುವ ಸಾಧ್ಯತೆಗಳು ಕಡಿಮೆಯಾಗುತ್ತವೆ. ಬೇವಿನ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚುತ್ತದೆ. ಬೇವು ರೈತರಿಗೆ ಇನ್ನೊಂದು ಆದಾಯಮೂಲವಾಗುತ್ತದೆ. ಕಾಳಸಂತೆ ಮತ್ತು ಅಕ್ರಮ ದಾಸ್ತಾನು ಕಡಿಮೆಯಾಗುತ್ತದೆ. ರೈತರಿಗೆ ನಿರಂತರವಾಗಿ ಯೂರಿಯಾ ಲಭ್ಯವಾಗುತ್ತದೆ. ರಸಗೊಬ್ಬರ ದರ್ಜೆಯ ಯೂರಿಯಾದ ದುರ್ಬಳಕೆ ನಿಲ್ಲುತ್ತದೆ.




ಆಮದು ವೆಚ್ಚ ಕಡಿಮೆಯಾಗಿ ವಿದೇಶೀ ವಿನಿಮಯದಲ್ಲಿ ಉಳಿತಾಯವಾಗುತ್ತದೆ. ಆಯವ್ಯಯ ಪತ್ರದಲ್ಲಿ ಸಹಾಯಧನದ ಹೊರೆ ಕಡಿಮೆಯಾಗುತ್ತದೆ.

**ಉತ್ಪಾದನೆಯ ಹೆಚ್ಚಳಕ್ಕೆ ಆದ್ಯತೆ**

ಒಂದು ನೀತಿನಿರೂಪಣೆಯನ್ನು ಮಾಡಿ ನಂತರ ಅದನ್ನು ಮರೆತು ಬಿಡುವುದು ಅನಂತಕುಮಾರರ ಜಾಯಮಾನವಲ್ಲ. ಅದನ್ನು ದಾಖಲೆಯ 189 ದಿನಗಳಲ್ಲಿ ಜಾರಿಗೆ ತರಲು ಅವಿರತವಾಗಿ ಶ್ರಮಿಸಿದರು. ದೇಶದಲ್ಲಿ ಯೂರಿಯಾ ಉತ್ಪಾದನಾ ಘಟಕಗಳ ದಕ್ಷತೆಯನ್ನು ಹೆಚ್ಚಿಸಲು ಹಲವಾರು ಕ್ರಮಗಳನ್ನು ತೆಗೆದುಕೊಂಡರು. ಇದರ ಫಲವಾಗಿ ಯಾವುದೇ ಹೆಚ್ಚುವರಿ ಬಂಡವಾಳ ತೊಡಗಿಸದೆ ವಾರ್ಷಿಕವಾಗಿ 20 ಲಕ್ಷ ಟನ್ ಅಧಿಕ ಉತ್ಪಾದನೆ ಸಾಧ್ಯವಾಯಿತು. ಆಮದಾಗುವ ಯೂರಿಯಾದ ದುರ್ಬಳಕೆಯನ್ನು ತಪ್ಪಿಸಲು ದೇಶದ 9 ಬಂದರುಗಳಲ್ಲಿ ಬೇವು ಲೇಪನ ಮಾಡುವ ಸೌಲಭ್ಯಗಳನ್ನು ಕಲ್ಪಿಸಲಾಯಿತು. ಉತ್ಪಾದನೆಯನ್ನು ಹೆಚ್ಚುಮಾಡಲು ಉತ್ಪಾದನೆಯನ್ನು ಸ್ಥಗಿತಗೊಳಿಸಿದ್ದ ಅನೇಕ ಘಟಕಗಳನ್ನು ಪುನರಾರಂಭಿಸಿದರು. ಇದೇ ಹಂತದಲ್ಲಿ ಉತ್ಪಾದನೆಯನ್ನು ಸ್ಥಗಿತಗೊಳಿಸಿದ್ದ ಮಂಗಳೂರು ರಸಗೊಬ್ಬರ ಕಾರ್ಖಾನೆಯನ್ನೂ ಪುನರಾರಂಭಿಸಿದರು. ಇದರಿಂದ ಸಾವಿರಾರು ಜನರಿಗೆ ಉದ್ಯೋಗ ಭದ್ರತೆ ದೊರೆಯಿತು. ಇವೆಲ್ಲ ಪ್ರಯತ್ನಗಳ ಜೊತೆಗೆ ಹಲವಾರು ಹೊಸ ಘಟಕಗಳ ಸ್ಥಾಪನೆಗೆ ಕ್ರಮ ತೆಗೆದುಕೊಳ್ಳಲಾಗಿದೆ.

ಯೂರಿಯಾ ಉತ್ಪಾದನೆ ಮತ್ತು ಸಾಗಾಣಿಕೆ ವೆಚ್ಚವನ್ನು ಕಡಿಮೆಮಾಡಲು ಅನೇಕ ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಗ್ಯಾಸ್ ಪ್ರೈಸ್ ಪೂಲಿಂಗ್ ಎಂಬ ವಿನೂತನ ಸುಧಾರಣಾ ಕ್ರಮದಿಂದ ದಾಖಲೆ ಪ್ರಮಾಣದ ಉತ್ಪಾದನೆ ಸಾಧ್ಯವಾಗಿದೆ. ರೈತರಿಗೆ ಬಿತ್ತನೆಯ ಕಾಲದಲ್ಲಿ ಅಗತ್ಯ ಪ್ರಮಾಣದಲ್ಲಿ ಯೂರಿಯಾ ದೊರೆಯುವಂತೆ ರಾಜ್ಯಗಳಲ್ಲಿ ದಾಸ್ತಾನು ವ್ಯವಸ್ಥೆಯನ್ನು ಉತ್ತಮ ಪಡಿಸಲಾಯಿತು. ಸಾಗಾಣಿಕೆಯಲ್ಲಿ ವಿಳಂಬವಾಗದಂತೆ ರೈಲ್ವೇ ರೇಕುಗಳ ಪ್ರಮಾಣವನ್ನು ಹೆಚ್ಚಿಸಲಾಯಿತು. ರೈತರ ಅಲೆದಾಟವನ್ನು ತಪ್ಪಿಸಲು 200 ಕಿಸಾನ್ ಸುವಿಧಾ ಕೇಂದ್ರಗಳನ್ನು ತೆರೆದು ರೈತರಿಗೆ ಬೇಕಾದ ಎಲ್ಲ ಸೌಲಭ್ಯಗಳೂ ಒಂದೇ ಸೂರಿನಡಿಯಲ್ಲಿ ದೊರೆಯುವ ವ್ಯವಸ್ಥೆ ಮಾಡಲಾಯಿತು. ಏಕರೂಪದ ಸರಕು ದರ ಅಧಿಸೂಚನೆ ಹೊರಡಿಸುವುದರ ಮೂಲಕ ದೇಶದಾದ್ಯಂತ ರಸಗೊಬ್ಬರವು ತಾರತಮ್ಯವಿಲ್ಲದೆ ದೊರೆಯಲು ತೊಡಗಿತು.

ಅನಂತಕುಮಾರರ ಈ ಪರಿಶ್ರಮವನ್ನು ಪ್ರಧಾನಿ ಮೋದಿಯವರು ದೇಶ ವಿದೇಶಗಳ ಹಲವಾರು ವೇದಿಕೆಗಳಲ್ಲಿ ಪ್ರಶಂಸೆ ಮಾಡಿದ್ದಾರೆ. ಇದಕ್ಕಿಂತ ಹೆಚ್ಚಾಗಿ, ಸಕಾಲಕ್ಕೆ ರಸಗೊಬ್ಬರ ದೊರೆತು, ಯೂರಿಯಾದ ಜೊತೆಗೆ ಬೇವಿನ ಪ್ರಯೋಜನವೂ ದೊರೆತು ಆದಾಯ ಹೆಚ್ಚಿಸಿಕೊಂಡ ರೈತನ ಮುಗುಳ್ನಗುವಿಗಿಂತ ಹೆಚ್ಚಿನ ಪ್ರಶಂಸೆ ಬೇಕೇ?

ನಮ್ಮಲ್ಲಿ ಆರ್ಷೇಯ ಜ್ಞಾನ ಭಂಡಾರವಿದೆ, ಆಧುನಿಕ ತಂತ್ರಜ್ಞಾನವಿದೆ, ಸಂಪನ್ಮೂಲವೂ ಇದೆ. ಇವೆಲ್ಲವನ್ನೂ ಪರಸ್ಪರ ಬೆಸೆದು ಸಮಾಜದ ಹಿತಕ್ಕಾಗಿ ಬಳಸುವ ನೇತೃತ್ವದ ಕೊರತೆಯಿದೆ, ರಾಜಕೀಯ ಇಚ್ಛಾಶಕ್ತಿಯ ಕೊರತೆಯಿದೆ. ತನ್ನನ್ನು ಆರಿಸಿದ ಜನರಿಗೆ ಮತ್ತು ದೇಶಕ್ಕೆ ಮಾತ್ರ ನಿಷ್ಠೆಯನ್ನು ಹೊಂದಿದ ಪ್ರತಿನಿಧಿಗಳು ಮಾತ್ರ ಅಂತಹ ಇಚ್ಛಾಶಕ್ತಿಯನ್ನು ಪ್ರದರ್ಶಿಸಬಲ್ಲರು. ಅನಂತಕುಮಾರರಲ್ಲಿ ಅಂಥ ದೇಶಭಕ್ತಿ ಸದಾ ಜಾಗೃತವಾಗಿತ್ತು; ದೇಶವಿರೋಧಿ, ಲಾಭಕೋರ ಹೊಂತಕಾರಿಗಳಿಗೆ ತಲೆಬಾಗದ ಎಚ್ಚರವೊಂದಿತ್ತು.

ಮಣಿಯದಿಹ ಮನವೊಂದು, ಸಾಧಿಸುವ ಹಟವೊಂದು,<br>
ನಿಜದ ನೇರಕೆ ನಡೆವ ನಿಶ್ಚಲತೆಯೊಂದು<br>
ಅನ್ಯಾಯಕೆಂದೆಂದು ಬಾಗದೆಚ್ಚರವೊಂದು,<br>
ಮರುಕಕ್ಕೆ ಪ್ರೇಮಕ್ಕೆ ಚಿರತೆರೆದ ಎದೆಯೊಂದು

-ಎಂಬ ವಿಸೀಯವರ ಮಾತುಗಳು ಅನಂತಕುಮಾರರಿಗೆ ಅನ್ವರ್ಥವಾಗಿ ಅನ್ವಯವಾಗುತ್ತದೆ. ವ್ಯಕ್ತಿತ್ವ, ಕರ್ತೃತ್ವ, ನೇತೃತ್ವಗಳು ಅನಂತಕುಮಾರರಲ್ಲಿ ಮುಪ್ಪುರಿಗೊಂಡಿದ್ದವು ಎಂಬುದಕ್ಕೆ ಅವರು ಮಂತ್ರಿಯಾಗಿ ರಾಸಾಯನಿಕ ಮತ್ತು ರಸಗೊಬ್ಬರ ಖಾತೆಯನ್ನು ನಿರ್ವಹಿಸಿದ ರೀತಿಯೇ ನಿದರ್ಶನ.



**ಕೆ. ಜನಾರ್ದನ ತುಂಗ**
ಬೆಂಗಳೂರು

# ಅನಂತಕುಮಾರ ನೆನಪು ಜೀವಂತವಾಗಿಡುವ ಅನಂತಪಥ

ವಿಶ್ವೇಶ್ವರ ಭಟ್

ಅನಂತಕುಮಾರ್ ಪ್ರತಿಷ್ಠಾನ ಪ್ರತಿತಿಂಗಳು 'ಅನಂತಪಥ' ಎಂಬ ಹೆಸರಿನಲ್ಲಿ ಹನ್ನೆರಡು ಪುಟಗಳ ಪತ್ರಿಕೆಯೊಂದನ್ನು ಕಳೆದ ಒಂಭತ್ತು ತಿಂಗಳಿನಿಂದ ಹೊರತರುತ್ತಿದೆ. ಹೆಸರೇ ಸೂಚಿಸುವಂತೆ, ಈ ಪತ್ರಿಕೆ ಶ್ರೀ ಅನಂತಕುಮಾರ್ ಅವರ ಸ್ಮರಣೆಗೆ ಮೀಸಲು. ಶ್ರೀ ಅನಂತಕುಮಾರ್ ಅವರ ಜೊತೆ ಒಡನಾಡಿದ ರಾಜಕೀಯ ನಾಯಕರ ಲೇಖನ, ಅವರ ಆಪ್ತರ ಅನಿಸಿಕೆ, ಸ್ಮರಣೀಯ ಘಟನೆ, ಪ್ರಸಂಗ, ಶ್ರೀ. ಅನಂತಕುಮಾರ್ ಅವರ ಕಾರ್ಯಸಾಧನೆ, ಅವರ ಭಾಷಣ, ಪ್ರಮುಖ ಘಟನೆಗಳನ್ನು ಪ್ರತಿ ಸಂಚಿಕೆ ಒಳಗೊಂಡಿರುವುದು ವಿಶೇಷ. ಇದರ ಜೊತೆಗೆ ಶ್ರೀ.ಅನಂತಕುಮಾರ್ ಅವರ ಹತ್ತಾರು ಫೋಟೋಗಳನ್ನು ಸಹ ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತಿದೆ. ಇದರೊಂದಿಗೆ ಪರಿಣತರ ವಿಶೇಷ ಲೇಖನಗಳಿಗೂ ಅವಕಾಶ ಕಲ್ಪಿಸಿಕೊಡಲಾಗಿದೆ.

ಈ ಪತ್ರಿಕೆಯನ್ನು ತಿರುವಿ ಹಾಕಿದರೆ, ಶ್ರೀ ಅನಂತಕುಮಾರ್ ಅವರ ನೆನಪು ಉಮ್ಮಳಿಸಿ ಬರುವುದು ಸಹಜ. ಶ್ರೀ ಅನಂತಕುಮಾರ್ ಅವರಂಥ ಒಬ್ಬ ಕ್ರಿಯಾಶೀಲ ನಾಯಕ, ಅವರ ನಿಧನದ ನಂತರವೂ ಹಲವರಲ್ಲಿ ಪ್ರೇರಣೆ ನೀಡಬೇಕೆಂಬ ಸದಾಶಯದೊಂದಿಗೆ ಆರಂಭವಾದ ಈ ಪತ್ರಿಕೆ, ಆ ನಿಟ್ಟಿನಲ್ಲಿ ನಿರೀಕ್ಷೆಗಿಂತ ಚೆಂದವಾಗಿ ಮೂಡಿ ಬರುತ್ತಿದೆ. ಬಳಸಿದ ಕಾಗದ, ಅಕ್ಷರ, ವಿನ್ಯಾಸ, ರೂಪ, ಅಚ್ಚುಕಟ್ಟುತನ ಮತ್ತು ಹೂರಣ ಇಡೀ ಪತ್ರಿಕೆಯ ಒಟ್ಟು ಅಂದವನ್ನು ಹೆಚ್ಚಿಸಿದೆಯಲ್ಲದೇ ಸಂಗ್ರಹ ಯೋಗ್ಯ ಮೌಲ್ಯವನ್ನು ವೃದ್ಧಿಸಿದೆ.

ಶ್ರೀ.ಅನಂತಕುಮಾರ್ ಅವರು ಹೇಳುತ್ತಿದ್ದ ಜೋಕುಗಳು, ದೃಷ್ಟಾಂತಗಳು ಸಾವಿರಾರು. ಯಾವುದೇ ವಿಷಯದ ಬಗ್ಗೆ ಯಾರಾದರೂ ಮಾತಾಡಿದಾಗ, ಅವರು ಅದನ್ನು ಇನ್ನಷ್ಟು ಹೊಸ ಸಂಗತಿಗಳಿಂದ ವಿಸ್ತರಿಸುತ್ತಿದ್ದರು. ತಮ್ಮ ಅನುಭವಗಳನ್ನು ಸೇರಿಸಿ, ಆ ವಿಷಯ ಪ್ರಸ್ತಾಪಿಸಿದವರಿಗೆ ಅಚ್ಚರಿ ಮೂಡಿಸಿ, ವಿಷಯಕ್ಕೆ ಹೊಸ ಆಯಾಮ ನೀಡುತ್ತಿದ್ದರು. ಅವರು ಅದೆಷ್ಟು ಒಳ್ಳೆಯ ಮಾತುಗಾರರೋ, ಅಷ್ಟೇ ಒಳ್ಳೆಯ ಕೇಳುಗರಾಗಿದ್ದರು. ಯಾರಾದರೂ ತಮ್ಮ ಮುಂದೆ ಹೊಸ ವಿಷಯ ಹೇಳುವಾಗ ಅವರು ಮಂತ್ರಮುಗ್ಧರಾಗಿ ಕೇಳುತ್ತಿದ್ದರು. ಇನ್ನಷ್ಟು ಕೇಳಿ ತಿಳಿದುಕೊಳ್ಳುವ ಆಸಕ್ತಿ ತೋರುತ್ತಿದ್ದರು.

ಅದನ್ನೇ ಯಥಾವತ್ತು ಮನಸ್ಸಿನಲ್ಲಿ ಮುದ್ರಿಸಿಕೊಂಡು, ಮುಂದೆ ಸಂದರ್ಭ ಬಂದಾಗ, ಅಕ್ಷರಶ: ಮರುಪ್ರಸ್ತುತಿ ಮಾಡುತ್ತಿದ್ದರು. ಅವರಿಗೆ ಅಸಾಧಾರಣ ಜ್ಞಾಪಕಶಕ್ತಿ ಇತ್ತು. ಯಾರೇ ಸಿಕ್ಕರೂ, ಅವರು ಅಪರಿಚಿತರಾದರೂ ಸರಿಯೇ, ಅವರನ್ನು ಹಿಡಿದಿಟ್ಟುಕೊಳ್ಳುವ ಸೊಗಸುಗಾರಿಕೆ ಅವರಿಗೆ ಸಿದ್ಧಿಸಿತ್ತು. ಅವರ ಜೊತೆಯಲ್ಲಿದ್ದಾಗ ನೀರಸ ಕ್ಷಣ ಎಂಬುದೇ ಇರಲಿಲ್ಲ. ಪ್ರತಿ ಭೇಟಿಯನ್ನೂ ಅವರು ಒಂದಿಲ್ಲೊಂದು ರೀತಿಯಲ್ಲಿ ಸ್ಮರಣೀಯವಾಗಿಸುತ್ತಿದ್ದರು. ಏನಿಲ್ಲವೆಂದರೂ, ಪಕ್ಷದ ಕಾರ್ಯಕರ್ತ ಬಹಳ ವರ್ಷಗಳ ನಂತರ ಸಿಕ್ಕರೆ, ಅವರ ಮನೆ-ಮಂದಿಯ ಹೆಸರುಗಳನ್ನೆಲ್ಲಾ ಹೇಳಿ, ದಂಗು ಬಡಿಸಿ ಕಳುಹಿಸುತ್ತಿದ್ದರು.

ಶ್ರೀ. ಅನಂತಕುಮಾರ್ ಅವರಲ್ಲಿ ಬೀಚಿ ಮತ್ತು ( ಜನಸಂಘ) ನಾಯಕ ಶ್ರೀ ಜಗನ್ನಾಥರಾವ್ ಜೋಷಿಯವರ ಹಾಸ್ಯ ಚಟಾಕಿಗಳ ಅಪೂರ್ವ ಸಂಗ್ರಹವಿತ್ತು. ಒಮ್ಮೆ ಅವರು ಇವರಿಬ್ಬರ ಜೋಕುಗಳನ್ನು ಮೂರು ತಾಸುಗಳವರೆಗೆ ಹೇಳಿ ಹೊಟ್ಟೆ ಹುಣ್ಣಾಗುವಷ್ಟು ನಗಿಸಿದ್ದರು. ಒಳ್ಳೆಯ ಹಾಸ್ಯಗಳನ್ನು ಆಸ್ವಾದಿಸುವವರು ಸಿಕ್ಕರೆ, ಸಮಯದ ಪರಿವೆಯಿಲ್ಲದೆ ಹರಟೆ ಕೊಚ್ಚುತ್ತಿದ್ದರು. ಕೇಳುಗರಿಗೆ ಶ್ರೀ ಅನಂತಕುಮಾರ್ ಅವರು ಇನ್ನು ಸ್ವಲ್ಪ ಹೊತ್ತು ಹೀಗೆ ಮಾತಾಡುತ್ತಿರಲಿ ಎಂದು ಅನ್ನಿಸುತ್ತಿತ್ತು. ಹರಟೆ ಮುಗಿಸಿ ಹೊರಡಲು ಅವರಿಗೂ ಮತ್ತು ಯಾರಿಗೂ ಮನಸ್ಸಿರುತ್ತಿರಲಿಲ್ಲ.

'ಒಂದು ವೇಳೆ ನಾನು ಬರೆದುದೆಲ್ಲ ಸುಟ್ಟು ನಾಶವಾದರೆ ಚಿಂತೆಯಿಲ್ಲ ವೈ.ಎನ್ಕೆ ಎಂಬ ಪತ್ರಕರ್ತನಿದ್ದಾನೆ, ಆತ ತನ್ನ ನೆನಪಿನ ಶಕ್ತಿಯಿಂದಲೇ ಎಲ್ಲವನ್ನು ಬರೆಯಬಲ್ಲ, ನನ್ನ ಸಾಹಿತ್ಯವನ್ನು ಮರುಸೃಷ್ಟಿಸಬಲ್ಲ' ಎಂದು ಖ್ಯಾತ ನಾಟಕಗಾರ, ಸಾಹಿತಿ ಟಿ.ಪಿ ಕೈಲಾಸಂ ಹೇಳಿದ್ದರಂತೆ. ಈ ಮಾತನ್ನು ಶ್ರೀ ಅನಂತಕುಮಾರ್ ಅವರಿಗೂ ಅನ್ವಯಿಸಬಹುದು. ಶ್ರೀ.ಅಟಲ್ ಬಿಹಾರಿ ವಾಜಪೇಯಿಯವರು ಹೇಳಿದ ಮಾತುಗಳು, ಹಾರಿಸಿದ ಚಟಾಕಿಗಳು, ಮಾಡಿದ ಪ್ರಮುಖ ಭಾಷಣಗಳನ್ನು ಅವರು ಅದೇ ಧಾಟಿಯಲ್ಲಿ ಮರುಪ್ರಸ್ತುತಿ ಮಾಡಬಲ್ಲವರಾಗಿದ್ದರು. ಅಮೇರಿಕ, ಬ್ರಿಟನ್ನಿನ ರಾಜಕೀಯ ನಾಯಕರುಗಳ ಕಥೆ, ದೃಷ್ಟಾಂತ, ಹಾಸ್ಯ ಪ್ರಸಂಗಗಳು ಅವರಲ್ಲಿ ದಂಡಿಯಾಗಿದ್ದವು.



ಒಂದು ಸಮಸ್ಯೆಯನ್ನು ಪರಿಣಾಮಕಾರಿಯಾಗಿ ನಿವೇದಿಸುವ ಕಲೆ ಅವರಿಗೆ ಕರಗತವಾಗಿತ್ತು. ಸಮಯ, ಸಂದರ್ಭ ಮತ್ತು ವ್ಯಕ್ತಿಗಳನ್ನು ನೋಡಿ, ಅವರು ಒಂದು ವಿಷಯ, ಸಮಸ್ಯೆ, ವಿವಾದ, ಘಟನೆಯನ್ನು ಚೆಂದವಾಗಿ ನಿವೇದಿಸುತ್ತಿದ್ದರು. ಒಮ್ಮೆ ಬೆಂಗಳೂರಿನಲ್ಲಿ ತಮ್ಮ ಭಾಷಣವನ್ನು ಮೊಟಕುಗೊಳಿಸಿ ಹಠಾತ್ ನಿರ್ಗಮಿಸುವ ಸಮಯ ಬಂದಾಗ, 'ಬಿ.ಜೆ.ಪಿಯಲ್ಲಿ ನನ್ನ ಕೊರತೆಯಿದೆ ಎಂದು ಅನ್ನಿಸಿದರೆ, ಚಿಂತೆ ಮಾಡಬೇಡಿ, ಶ್ರೀ.ಅನಂತಕುಮಾರ್ ಇದ್ದಾರೆ' ಎಂದು ಶ್ರೀ ಪ್ರಮೋದ್ ಮಹಾಜನ್ ಭಾಷಣದಲ್ಲಿ ಹೇಳಿದ್ದರು. ಅದು ನಿಜವೂ ಆಗಿತ್ತು. ಅವರಿಬ್ಬರೂ ಪೈಪೋಟಿಗೆ ಬಿದ್ದವರಂತೆ ಹರಟೆ ಹೊಡೆಯುತ್ತಿದ್ದರು. ಅದನ್ನು ಕೇಳುವುದೇ ಅದು ಅಪರೂಪದ ಅನುಭೂತಿಯಾಗಿತ್ತು.

ಸುಮಾರು ಎರಡು ದಶಕಗಳ ಕಾಲ, ಬಿಜೆಪಿಯ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಂಸದೀಯ ಮಂಡಳಿಯ ಸದಸ್ಯರಾಗಿದ್ದ ಶ್ರೀ ಅನಂತಕುಮಾರ್, ಕಾಲು ಶತಮಾನದ ರಾಷ್ಟ್ರ ರಾಜಕಾರಣದ ವಿದ್ಯಮಾನಗಳಿಗೆ ಪ್ರತ್ಯಕ್ಷದರ್ಶಿಯಾಗಿದ್ದರು. ಪ್ರಮುಖ ಐದು ಸಂಸದೀಯ ಸ್ಥಾಯಿ ಸಮಿತಿಗಳ ಅಧ್ಯಕ್ಷರೂ ಆಗಿದ್ದ ಅವರಲ್ಲಿ ರಾಷ್ಟ್ರೀಯ ಸಮಸ್ಯೆಯ ಯಾವುದೇ ಕವಲುಗಳನ್ನು ಚರ್ಚಿಸಿದರೆ ಸಮಾಧಾನಕರ ಉತ್ತರ ಸಿಗುತ್ತಿತ್ತು. ಸಂಸದೀಯ ವ್ಯವಹಾರಗಳ ಖಾತೆ ಸಚಿವರಾಗಿದ್ದ ಅವರು, ಲೋಕಸಭೆಯ ಎಲ್ಲಾ ೫೪೫ ಕ್ಷೇತ್ರಗಳು ಮತ್ತು ಅವುಗಳನ್ನು ಪ್ರತಿನಿಧಿಸುವ ಸದಸ್ಯರ ಹೆಸರುಗಳನ್ನು ಹೇಳುತ್ತಿದ್ದರು ಮತ್ತು ಅವರ ಜೊತೆ ಸಂಪರ್ಕ ಹೊಂದಿದ್ದರು. ಈ ಲೋಕಸಭಾ ಸದಸ್ಯರ ವೈಶಿಷ್ಟ್ಯ, ಅಪರೂಪದ ಸಂಗತಿಗಳನ್ನು ಸಹ ಅವರು ರಸವತ್ತಾಗಿ ಬಣ್ಣಿಸುತ್ತಿದ್ದರು.

ಒಮ್ಮೆ ಒರಿಸ್ಸಾದ ಜಗತ್ ಸಿಂಗ್ ಪುರ ಲೋಕಸಭಾ ಕ್ಷೇತ್ರದ ಸದಸ್ಯ ಬಿಜೆಡಿಯ ಶ್ರೀ ಕುಲಮಣಿ ಸಮಲ್ ಎಂಬುವವರು ಅವರನ್ನು ಭೇಟಿ ಮಾಡಲು ಬಂದಿದ್ದರು. ಶ್ರೀ ಸಮಲ್ ಅವರು ತಮ್ಮ ಜೊತೆ ಬಂದಿದ್ದ ತಮಗಿಂತ ಹಿಂದಿನ ಸದಸ್ಯರೊಬ್ಬರನ್ನು ಪರಿಚಯಿಸಿದರು. ಆಗ ಶ್ರೀ ಅನಂತಕುಮಾರ್ 'ಶ್ರೀ ತ್ರಿಲೋಚನ ಕನುಂಗೋ ಹೇಗಿದ್ದಾರೆ? ಶ್ರೀ ಬಿಭೂ ಪ್ರಸಾದ ತರೈ ಹೇಗಿದ್ದಾರೆ?' ಎಂದು ಅವರಿಗಿಂತ ಮೊದಲು ಅದೇ ಕ್ಷೇತ್ರವನ್ನು ಪ್ರತಿನಿಧಿಸಿದ್ದವರ ಹೆಸರುಗಳನ್ನೂ ಹೇಳಿ, ಶ್ರೀ ಕುಲಮಣಿ ಸಮಲ್ ಅವರಿಗೆ ಅಚ್ಚರಿ ಮೂಡಿಸಿದ್ದರು.

ಶ್ರೀ.ಅನಂತಕುಮಾರ್ ಅವರ ನೆನಪುಗಳನ್ನು ಜೀವಂತವಾಗಿರಿಸುವ ಅವರ ಪತ್ನಿ ಶ್ರೀಮತಿ ತೇಜಸ್ವಿನಿ ಅವರ ಕಾರ್ಯ ಸ್ತುತ್ಯರ್ಹ. ಶ್ರೀ.ಅನಂತಕುಮಾರ್ ಅವರ ಬಗ್ಗೆ ಅನೇಕರಿಗೆ ತಕರಾರು ಇತ್ತು, ಆದರೆ ಅವರ ನಿಧನದ ನಂತರ ಬಿಜೆಪಿಯಲ್ಲಿ ಅವರ ಅನುಪಸ್ಥಿತಿ ಅನುಗಾಲ ಕಾಡುವುದು ಸಹಜ. 'ಅನಂತಪಥ' ಓದಿದ ಬಳಿಕ ಇವೆಲ್ಲಾ ಯಾಕೋ ನೆನಪಾದವು. ಮೂರು ವರ್ಷಗಳ ಕಾಲ ಅವರ ಜೊತೆ ನಿಕಟ ಒಡನಾಟವಿದ್ದ ನಾನು, ನನ್ನ ನೆನಪಿನ ಗಣಿಯನ್ನು ಆಗಾಗ ಬರಿದು ಮಾಡಬೇಕು.

( ಸೌಜನ್ಯ: ವಿಶ್ವವಾಣಿ ದಿನಪತ್ರಿಕೆಯಲ್ಲಿ ಶ್ರೀ ವಿಶ್ವೇಶ್ವರ ಭಟ್ ಅವರ ಅಂಕಣ ಬರೆಹದಿಂದ ಸಂಗ್ರಹ )

# ರಾಷ್ಟ್ರಜೀವನಕ್ಕೆ ಮಾರ್ಗದರ್ಶಕವಾದ ಸಮಾಜ ಸೇವೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ

ಪುಟ 1 ರಿಂದ ಮಾಡತೊಡಗಿದರು. ಅದರ ನಂತರದಲ್ಲಿ ಪರಿಷತ್ತಿನ ಪೂರ್ಣಾವಧಿ ಕಾರ್ಯಕರ್ತರಾಗಿ ಅನೇಕ ಜವಾಬ್ದಾರಿಗಳನ್ನು ರಾಜ್ಯ, ರಾಷ್ಟ್ರ ಮಟ್ಟದಲ್ಲಿ ನಿರ್ವಹಿಸಿದರು. ಮುಂದೆ ಭಾರತೀಯ ಜನತಾ ಪಾರ್ಟಿಯನ್ನು ಸೇರಿ, ಸಂಸದರಾಗಿ ಆಯ್ಕೆಯಾಗಿ, ಕೇಂದ್ರ ಸರಕಾರದ ಸಚಿವರಾಗಿ ಅನೇಕ ಖಾತೆಗಳನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಿಸಿದರು. ಅವರು ದೇಶದ ಆಡಳಿತಕ್ಕೆ, ಕರ್ನಾಟಕದ ಅಭಿವೃದ್ಧಿಗೆ ಒಂದು ಹೊಸ ಬಗೆಯ ನೇತೃತ್ವವನ್ನು ಕೊಟ್ಟಿರುವುದನ್ನು ನಾನು ವೈಯಕ್ತಿಕವಾಗಿ ಬಲ್ಲೆ. ರಾಜ್ಯದ ಜನತೆ ಅವರ ನೇತೃತ್ವದ ಪರಿಯನ್ನು ನೋಡಿದ್ದಾರೆ. ಇಡೀ ರಾಷ್ಟ್ರವೇ ಅವರ ನೇತೃತ್ವವನ್ನು ಮೆಚ್ಚಿಕೊಂಡಿದೆ.

ಸಾಮಾನ್ಯರಲ್ಲಿ ಸಾಮಾನ್ಯರಾಗಿ ತಮ್ಮ ಜೀವನವನ್ನು ನಡೆಸಿಕೊಂಡಿದ್ದ ಶ್ರೀ ಅನಂತ ಕುಮಾರ್ ಅವರು ರಾಷ್ಟ್ರೀಯತೆಯ ಕುರಿತು ಹೊಂದಿದ್ದ ಅಗಾಧವಾದ ಬದ್ಧತೆಯ ಕಾರಣದಿಂದ ದೇಶ ಕಟ್ಟುವ ಕೆಲಸವನ್ನು ಮಾಡಿದರು. ಅವರು ಕೇಂದ್ರ ಸಚಿವರಾಗಿ ಮಾಡಿರುವ ಕೆಲಸಗಳು, ಅವರು ರಾಜ್ಯಕ್ಕೆ ಕೊಟ್ಟ ಕೊಡುಗೆಗಳು ನಮ್ಮೆಲ್ಲರಿಗೆ ಸದಾಕಾಲ ಪ್ರೇರಣೆಯನ್ನು ಕೊಡುತ್ತವೆ. ವಿವಿಧತೆಯಲ್ಲಿ ಏಕತೆಯನ್ನು ಮೆರೆದಿರುವ ರಾಷ್ಟ್ರ ನಮ್ಮದು. ಭಾರತವನ್ನು ನಾವು ಎತ್ತರೆತ್ತರಕ್ಕೆ ಅಭಿವೃದ್ಧಿಯ ಪಥದಲ್ಲಿ ಮುನ್ನಡೆಸಬೇಕು ಮತ್ತು ಜಗತ್ತಿನ ಉಳಿದ ದೇಶಗಳಿಗೂ ಮಾದರಿಯಾಗುವ ಆಡಳಿತ ವ್ಯವಸ್ಥೆಯೊಂದನ್ನು ರೂಪಿಸಬೇಕಾದ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ. ಹಾಗಾಗಿ ನಾವು ಶ್ರೀ ಅನಂತ ಕುಮಾರ್ ಅವರ ನೆನಪುಗಳನ್ನು ಮೆಲುಕು ಹಾಕುತ್ತ ನಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಲು ಮುಂದಾಗೋಣ.

ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷನಾಗಿ ನಾನು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೇನೆ ಎಂದಾದರೆ ಅದಕ್ಕೆ ಶ್ರೀ ಅನಂತ ಕುಮಾರ್ ಅವರ ಒಡನಾಟ ಮತ್ತು ಸ್ನೇಹವೂ ಕಾರಣ ಎಂದು ನಾನು ನಂಬಿದ್ದೇನೆ. ಹಾಗಾಗಿ ಶ್ರೀ ಅನಂತ ಕುಮಾರ್ ಅವರ ವ್ಯಕ್ತಿತ್ವ, ಕರ್ತೃತ್ವ ಮತ್ತು ನೇತೃತ್ವಗಳ ಕುರಿತು ಯುವಜನರಲ್ಲಿ ಅರಿವು ಮೂಡಿಸುವ ಅಗತ್ಯವಿದೆ ಎಂದು ನನ್ನ ಅಭಿಮತ. ಮೈಸೂರು ಆಕಾಶವಾಣಿಯು ಪ್ರಾರಂಭಿಸಿರುವ " ಸಮಾಜ ಸೇವೆಯ ಅನಂತ ಅವಕಾಶ" ಸರಣಿಯು ಯುವಸಮುದಾಯಕ್ಕೆ ಸಮಾಜಸೇವೆಯ ಪ್ರೇರಣೆ ನೀಡುತ್ತದೆ ಎಂದು ನಾನು ಭಾವಿಸುತ್ತೇನೆ. ಅನಂತ ಕುಮಾರ್ ಪ್ರತಿಷ್ಠಾನವು ಯುವಪೀಳಿಗೆಯಲ್ಲಿ ರಾಷ್ಟ್ರೀಯ ದೃಷ್ಟಿಕೋನವನ್ನು, ವಿಶಾಲ ಮನೋಭಾವವನ್ನು ಬೆಳೆಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿ ಎಂದು ಬಯಸುತ್ತೇನೆ. ("ಸೌಜನ್ಯ: ಆಕಾಶವಾಣಿ, ಮೈಸೂರು ಕೇಂದ್ರ")

# ಕೈ ತುತ್ತು ತಿನ್ನಿಸಿದ ಅಣ್ಣ

ಪುಟ 2 ರಿಂದ ಅವರು ಲಕ್ಷ ಲಕ್ಷ ಮಕ್ಕಳಿಗೆ ಊಟ ಹಾಕಿಸಬೇಕೆಂಬ ಯೋಜನೆಯ ಹಿಂದಿನ ಪ್ರೇರಕ ಶಕ್ತಿ ಎನ್ನಬಹುದು.ಅನಂತಕುಮಾರ್ ನಿಧನರಾಗುವ ಮುಂಚಿನ ಲೋಕಸಭಾ ಅಧಿವೇಶನದ ಸಂದರ್ಭದಲ್ಲಿ ದೂರದ ರಾಯಚೂರಿನಿಂದ ದೆಹಲಿಗೆ ಒಂದು ನಿಯೋಗ ಬಂದಿತ್ತು. ಯಾರೋ ಮಂತ್ರಿಗಳನ್ನು ಅವರು ನೋಡಬೇಕಿತ್ತು. ಅನಂತಕುಮಾರ್ ಆ ಮಂತ್ರಿಗಳನ್ನು ಸಂಪರ್ಕಿಸಿ, ನಾನೇ ನಿಮ್ಮ ಕಚೇರಿಗೆ ಬರಲೇ? ಎಂದಾಗ ಅವರು, ಇಲ್ಲ ನಾನೇ ಬರುತ್ತೇನೆ ಎಂದು ಹೇಳಿದರು.

ಸಾಮಾನ್ಯವಾಗಿ ಐದಾರು ಜನ ಹಿರಿಯ ಮಂತ್ರಿಗಳನ್ನು ಬಿಟ್ಟರೆ ಉಳಿದವರೆಲ್ಲರೂ ಅನಂತ್ ಫೋನ್ ಮಾಡಿದರೆ ನಾವೇ ಅಲ್ಲಿಗೆ ಬರುತ್ತೇವೆ ಎನ್ನುತ್ತಿದ್ದರು. ಅಂದೂ ಹಾಗೆಯೇ ಆಯಿತು. ಆ ಮಂತ್ರಿಗಳು ೪ ಗಂಟೆಗೆ ಬರುವುದಾಗಿ ತಿಳಿಸಿದ್ದರು. ಅಷ್ಟರಲ್ಲಿ ಅನಂತಕುಮಾರ್ ಅವರಿಗೆ ಪ್ರಧಾನಮಂತ್ರಿ ಕಾರ್ಯಾಲಯದಿಂದ ದೂರವಾಣಿ ಬಂತು. ತುರ್ತಾಗಿ ಅವರು ಅಲ್ಲಿಗೆ ಹೋದರು. ಅವರು ಬರುವುದು ತಡವಾಗುತ್ತದೆಂದು ಹೇಳಿದ್ದರಿಂದ ನಾನೂ ಊಟ ಮಾಡಿದೆ. ಎರಡು ತಾಸಿನ ಬಳಿಕ ಅನಂತಕುಮಾರ್ ಬಂದವರೇ ರಾಯಚೂರಿನಿಂದ ಬಂದಿರುವ ಮಂದಿಗೆ ಊಟವಾಯಿತೇ? ಎಂದು ಸಿಬ್ಬಂದಿಯನ್ನು ಕೇಳಿದರು. ಇಲ್ಲ ಎಂಬ ಉತ್ತರ ಬಂತು. ಕೂಡಲೇ ಅಸಮಾಧಾನಗೊಂಡ ಅವರು " ಬಿಪಿ- ಶುಗರ್ ಇದ್ದ ಮಂದಿ ಇರ್ತಾರ.....ಅವರು ಉಪವಾಸ ಇದ್ದು ಏನಾದ್ರ ಆದ್ರೆ ಯಾರು ಜವಾಬ್ದಾರಿ? ಮೊದಲು ಅವ್ರಿಗೆ ಊಟ ಕೊಡ್ರೀ" ಎಂದು ಬೈದು ಊಟದ ವ್ಯವಸ್ಥೆ ಮಾಡಿಸಿದರು. ಇದು ಅವರ ವಿಶಾಲ ಅಂತಃಕರಣಕ್ಕೆ ಒಂದು ಸಾಕ್ಷಿ.

ಅವರ ಕೊನೆಯ ಸಂಸತ್ ಅಧಿವೇಶನವನ್ನು ನೆನೆದರೆ ಕಣ್ಣೀರು ಬರುತ್ತದೆ. ತಮ್ಮ ಆರೋಗ್ಯಕ್ಕೆ ತೊಂದರೆಯಾಗಿದೆ ಎಂದು ಅವರಿಗೆ ಗೊತ್ತಿತ್ತು. ಆ ಅಧಿವೇಶನದಲ್ಲಿ ವಿರೋಧ ಪಕ್ಷದಿಂದ ಅವಿಶ್ವಾಸ ನಿರ್ಣಯ ಮಂಡನೆ ಆಗುವುದಿತ್ತು. ಪದೇ ಪದೇ ಪ್ರಧಾನಮಂತ್ರಿಗಳ ಫೋನ್ ಬರುತ್ತಿತ್ತು. ಮತ್ತೆ ಮತ್ತೆ ಸಭೆ ಮುಂದೂಡಲ್ಪಡುತ್ತಿತ್ತು. ಅಂದು ಅವಿಶ್ವಾಸ ನಿರ್ಣಯವನ್ನು ಸೋಲಿಸುವ ಹೊಣೆಗಾರಿಕೆ ಅನಂತಕುಮಾರ್ ಮೇಲಿತ್ತು. ಅದಕ್ಕಾಗಿ ನಿಮಿಷವೂ ಬಿಡುವಿಲ್ಲದಂತೆ ಅವರು ಕೆಲಸ ಮಾಡುತ್ತಿದ್ದರು. ಹಲವು ರೀತಿಯ ತಂತ್ರಗಾರಿಕೆಯನ್ನು ಹೆಣೆಯುತ್ತಿದ್ದರು. ಕ್ಯಾ ಕರ್ನಾ? ಎಂದು ಹಿರಿಯರಿಂದ ಬರುತ್ತಿದ್ದ ಪ್ರಶ್ನೆಗೆ ಉತ್ತರವಾಗಿ, " ಮಸೂದೆಯನ್ನು ಸ್ವೀಕಾರ ಮಾಡಿ, ಚರ್ಚೆ ನಡೆಯಲಿ" ಎಂಬ ದಿಟ್ಟತನದ ಉತ್ತರವನ್ನು ಅನಂತಕುಮಾರ್ ನೀಡಿದರು. ಅದೆಂತಹ ಆತ್ಮವಿಶ್ವಾಸ ಅವರಲ್ಲಿತ್ತು ಎಂಬುದಕ್ಕೆ ಆ ಸಂದರ್ಭವೇ ಸಾಕ್ಷಿ. ಪ್ರತಿಯೊಂದು ಪಾಲುದಾರ ಪಕ್ಷವನ್ನೂ ಸಂಪರ್ಕಿಸಿ ಅವರು ಏನು ಮಾಡಬೇಕೆಂಬುದನ್ನು ಮನದಟ್ಟು ಮಾಡಿದ್ದರು. ಅದರಂತೆಯೇ ಎಲ್ಲವೂ ಸುಸೂತ್ರವಾಗಿ ನಡೆಯಿತು; ಅವಿಶ್ವಾಸ ಮಂಡನೆ ಬಿದ್ದುಹೋಯಿತು. ಸರ್ಕಾರ ಸುರಕ್ಷಿತವಾಗಿ ಉಳಿಯಿತು. ಅನಾರೋಗ್ಯದ ಸ್ಥಿತಿಯಲ್ಲಿಯೂ ಅಂದಿನ ಅವರ ಮನಃಸ್ಥೈರ್ಯವನ್ನು ನೆನೆದರೆ ಆಶ್ಚರ್ಯ ಉಂಟಾಗುತ್ತದೆ.

ಮಾರಣಾಂತಿಕವಾದ ರೋಗ ಬಂದಿದೆಯೆಂದು ತಿಳಿದಾಗ ಗಟ್ಟಿಯಾಗಿದ್ದವರೂ ಸಹ ಕುಂದಿಹೋಗುತ್ತಾರೆ. ಆ ಭಯದಲ್ಲೇ ಬೇಗ ಕಾಲವಾಗಿಬಿಡುತ್ತಾರೆ. ಆದರೆ ಅನಂತಕುಮಾರ್ ಅವರಿಗೆ ವೈದ್ಯರು ಇನ್ನು ಕೇವಲ ನಾಲ್ಕು ತಿಂಗಳು ಮಾತ್ರ ನೀವು ಬದುಕುತ್ತೀರಿ ಎಂದು ಹೇಳಿದಾಗಲೂ ಅವರು ಅಂಜಲಿಲ್ಲ, ಅಳುಕಲಿಲ್ಲ. ರನ್ನಿಂಗ್ ರೇಸಿಗೆ ಸಿದ್ಧವಾದರು. ಕೆಲಸಗಳಲ್ಲಿ ತಮ್ಮನ್ನು ಇನ್ನಷ್ಟು ವೇಗವಾಗಿ ತೊಡಗಿಸಿಕೊಂಡರು. ಯಾರೂ ತನ್ನನ್ನು ಕನಿಕರದಿಂದ ನೋಡಬಾರದು ಎಂಬುದು ಅವರ ಇಚ್ಛೆಯಾಗಿತ್ತು.

ಪದ-ಮದ ಒಟ್ಟಿಗೆ ಬರುತ್ತವೆ. ಅನಂತಕುಮಾರ್ ಅವರಿಗೆ ಜ್ಞಾನ, ಲವಲವಿಕೆ, ಅಗಾಧ ಬುದ್ಧಿಮತ್ತೆ, ಅಧಿಕಾರ(ಪದ) ಎಲ್ಲವೂ ಬಂತು...ಆದರೆ, ಮದ ಮಾತ್ರ ಬರಲೇ ಇಲ್ಲ. ಅವರ ನೆನಪಿನ ಶಕ್ತಿ ಅಗಾಧವಾಗಿತ್ತು. ಅವರು ಸಂಸದರಾಗಿ ಆಯ್ಕೆಯಾಗಿ ಹುಬ್ಬಳ್ಳಿಗೆ ಬಂದಾಗ ತನ್ನ ತಾಯಿ ಗಿರಿಜಾಶಾಸ್ತ್ರಿಯವರಿಗೆ ಚಪ್ಪಲಿ ಹೊಲೆದುಕೊಡುತ್ತಿದ್ದ ಮಾರುತಿ ಎಂಬುವವನನ್ನು ನೆನಪಿಸಿಕೊಂಡು ಅವನನ್ನು ಕರೆಸಿ ಅವನಿಗೆ ಹಣ ನೀಡಿ ಕಳುಹಿಸಿದ್ದರು. ಅವರಿಗೆ ಅನಾರೋಗ್ಯ ಉಂಟಾದ ನಂತರವೂ ಒಮ್ಮೆ ರಾಯಚೂರಿನಿಂದ ಬಂದಿದ್ದ ವ್ಯಕ್ತಿಯೊಬ್ಬನ ಪೂರ್ಣ ಹೆಸರು, ಅವರ ತಂದೆ-ತಾಯಿ ಹೆಸರು ಹೇಳಿ ೨೪ ವರ್ಷದ ಹಿಂದೆ ನಿನ್ನ ಮನೆಗೆ ಬಂದಿದ್ದೆ ಎಂದರು.

೧೯೯೮ರಲ್ಲಿ ಅವರು ವಿಮಾನಯಾನ ಸಚಿವರಾಗಿದ್ದಾಗ ಹುಬ್ಬಳ್ಳಿಯ ವಿಮಾನ ನಿಲ್ದಾಣದಲ್ಲಿ ಬಂದು ಇಳಿದ ವೇಳೆ ಅದ್ದೂರಿ ಸ್ವಾಗತ ಏರ್ಪಟ್ಟಿತ್ತು. ಆ ಸಂದರ್ಭದಲ್ಲಿ ರಸ್ತೆಯ ಬದಿಯಲ್ಲಿ ವಿದ್ಯಾರ್ಥಿಪರಿಷತ್ತಿನ ಹಳೆಯ ಕಾರ್ಯಕರ್ತನೊಬ್ಬ ನಿಂತಿದ್ದನ್ನು ಅನಂತಕುಮಾರ್ ಕಂಡರು. ಕೂಡಲೇ ಕಾರ್ ನಿಲ್ಲಿಸುವಂತೆ ಹೇಳಿ ಅವನನ್ನು ಕರೆದು ಅವನ ಕೈಗೆ ಒಂದಷ್ಟು ಹಣ ನೀಡಿ ಮುಂದಕ್ಕೆ ಸಾಗಿದರು. ಪಕ್ಕದಲ್ಲಿದ್ದವರ ಬಳಿ, " ಅವ ಭಾಳ ಕಷ್ಟದಲ್ಲಿದ್ದಾನ, ನನಗೆ ಗೊತ್ತು " ಎಂದು ಹೇಳಿದರು. ಯಾವುದೇ ಪದವಿಯಲ್ಲಿ ಇರಲಿ, ಎಂತಹ ಮೇಲ್ಮಟ್ಟದ ಅಧಿಕಾರವನ್ನು ಹೊಂದಿರಲಿ ಅವರು



ಹೀಗೆ ಸೂಕ್ಷ್ಮವಾಗಿ ಪ್ರತಿಯೊಬ್ಬರ ವಿಷಯದಲ್ಲೂ ಸ್ಪಂದಿಸುತ್ತಿದ್ದುದು ವಿಶೇಷವಾಗಿತ್ತು.

ಹುಬ್ಬಳ್ಳಿ-ಧಾರವಾಡದ ಮೇಲೆ ಅವರಿಗೆ ಅಪಾರ ಪ್ರೀತಿ ಇತ್ತು. ನಾನು ಯಾವುದೇ ಬೇಡಿಕೆಯನ್ನು ಅವರ ಬಳಿ ಇಟ್ಟಾಗಲೂ ಎಲ್ಲವೂ ಹುಬ್ಬಳ್ಳಿಗೇ ಬೇಕು ಅಂತೀಯ ಎಂದು ತಮಾಷೆ ಮಾಡುತ್ತಿದ್ದರು. ಆದರೆ ಆ ಕೆಲಸವನ್ನು ಅವರು ಮಾಡಿಕೊಡುತ್ತಿದ್ದರು. ಹುಬ್ಬಳ್ಳಿಗೆ ಎಲ್ಲ ಸೌಲಭ್ಯವೂ ಒದಗುವಂತೆ ಅವರು ವ್ಯವಸ್ಥೆಮಾಡಿದರು. ಐಐಟಿ ಬಂತು, ವಿಮಾನ ನಿಲ್ದಾಣ ಬಂತು, ಉಡಾನ್ ಯೋಜನೆಯ ಅಡಿಯಲ್ಲಿ ಹುಬ್ಬಳ್ಳಿ-ಧಾರವಾಡವನ್ನು ಸೇರಿಸಬೇಕೋ ಬೇಡವೋ ಎಂಬ ಚರ್ಚೆ ನಡೆಯುತ್ತಿದ್ದಾಗ ಸುರೇಶ್ ಪ್ರಭು ಅವರನ್ನು ತಮ್ಮ ಚೇಂಬರಿಗೆ ಕರೆಸಿ ಮಾತುಕತೆ ನಡೆಸಿ ಅದನ್ನು ಮಾಡಿಸಿದರು. ಐಐಟಿ ಕುರಿತ ನಿರ್ಣಯದ ಸಂದರ್ಭದಲ್ಲಿ ಸ್ವಲ್ಪ ಡೋಲಾಯಮಾನ ಪರಿಸ್ಥಿತಿ ಇದ್ದಾಗ ಸ್ಮೃತಿ ಇರಾನಿಯವರನ್ನು ಕರೆಸಿ ಮಾತನಾಡಿದರು. ' ಅನಂತ್ ಹೇಳಿದ ಮೇಲೆ ಮುಗಿಯಿತು' ಎಂದು ಹೇಳಿ ಅವರು ಒಂದು ಮಾತೂ ಆಡದೇ ಮಂಜೂರು ಮಾಡಿದರು. ಹಿಂದೆ ಸುವರ್ಣ ಪಥ ಯೋಜನೆಯ ಅಡಿಯಲ್ಲಿ ಹುಬ್ಬಳ್ಳಿಗೆ ಅನುಕೂಲವಾಗುವಂತೆ ರಸ್ತೆ ಮಂಜೂರಾದಾಗ ಅನಂತಕುಮಾರ್ ನನ್ನ ಬಳಿ ನಾನೇ ಹೇಳಿ ಇಲ್ಲಿಗೆ ಅನುಕೂಲವಾಗುವಂತೆ ಮಾಡಿಸಿದೆ ಎಂದು ಹೇಳಿದ್ದರು. ನಾನು ಅಗ ಅದನ್ನು ನಂಬಿರಲಿಲ್ಲ, ಸುಮ್ಮನೆ ಹೇಳುತ್ತಿದ್ದಾರೆ ಎಂದು ಭಾವಿಸಿದ್ದೆ. ಅದರೆ ಅದರ ಭೂಮಿಪೂಜೆ ಸಂದರ್ಭದಲ್ಲಿ ಆಗಿನ ಮಂತ್ರಿಗಳಾದ ಖಂಡೂರಿ ಅವರು ಈ ವಿಷಯದಲ್ಲಿ ನೀವೆಲ್ಲ ಅನಂತಕುಮಾರರನ್ನು ನೆನಪಿಟ್ಟುಕೊಳ್ಳಬೇಕು ಎಂದು ಹೇಳಿದರು. ಬೇರೆ ಕಡೆಗೆ ಹಾದುಹೋಗುವ ರಸ್ತೆಯನ್ನು ಅಟಲ್ ಜೀಯೊಂದಿಗೆ ಮಾತನಾಡಿ ಅನಂತ್ ಕುಮಾರ್ ಅವರೇ ಈ ಕಡೆಗೆ ಬರುವಂತೆ ಬದಲಾಯಿಸಿದರು ಎಂದು ಆಗ ನಮಗೆ ತಿಳಿಯಿತು. ಈ ಕೆಲಸದಿಂದ ಈ ಭಾಗದ ಜನರಿಗೆ ಅದೆಷ್ಟು ಉಪಕಾರವಾಗಿದೆ ಎಂದರೆ ಹೇಳತೀರದು. ಹೀಗೆ ಹುಬ್ಬಳ್ಳಿ- ಧಾರವಾಡಕ್ಕೆ ಅನುಕೂಲವಾಗುವಂತಹ ಹಲವಾರು ಕಾರ್ಯಗಳನ್ನು ಅವರು ಪ್ರೀತಿಪೂರ್ವಕವಾಗಿ ಮಾಡಿದ್ದಾರೆ.

ಎಷ್ಟೇ ನೋವಿದ್ದರೂ ಸದಾ ನಗುಮೊಗದಿಂದಲೇ ಇರುತ್ತಿದ್ದ ಅನಂತಕುಮಾರ ಎದುರಾಗುತ್ತಿದ್ದ ಸಮಸ್ಯೆಗಳನ್ನು ಶಾಂತವಾಗಿ ಅಷ್ಟೇ ಸಮರ್ಥವಾಗಿ ಎದುರಿಸುತ್ತಿದ್ದರು. ಒಮ್ಮೊಮ್ಮೆ ಆವರು ಕೆಲವರ ಮೇಲೆ ಸಿಟ್ಟಿಗೇಳುತ್ತಿದ್ದರೂ, ಐದು ಹತ್ತು ನಿಮಿಷದೊಳಗೆ ಅವರಾಗಿಯೇ ಕರೆದು ಹೆಗಲ ಮೇಲೆ ಕೈಹಾಕಿ ಪ್ರೀತಿಯಿಂದ ಮಾತನಾಡುತ್ತಿದ್ದರು. ಇಂತಹ ಎಷ್ಟೋ ಸನ್ನಿವೇಶಗಳನ್ನು ನಾನು ಬಾಲ್ಯದಿಂದಲೂ ನೋಡುತ್ತ ಬಂದಿದ್ದೇನೆ. ನನ್ನ ಬಾಲ್ಯದ ಗೆಳೆಯ, ರಾಜಕೀಯದ ಮಾರ್ಗದರ್ಶಿ, ಎಲ್ಲಕ್ಕೂ ಮಿಗಿಲಾಗಿ ಕುಟುಂಬದ ಒಡನಾಡಿಯಾಗಿ ಕೈ ತುತ್ತು ತಿನ್ನಿಸಿದ ಅಣ್ಣ ಇನ್ನು ನೆನಪು ಮಾತ್ರ. ಅನಂತಕುಮಾರ್ ಇನ್ನಿಲ್ಲ ಎನ್ನುವ ನೋವು ಅರಗಿಸಿಕೊಳ್ಳಲಾಗದು.

ಅಂತಹ ಜನಾನುರಾಗಿ, ಮುತ್ಸದ್ದಿ ರಾಜಕಾರಣಿಯಾದ ಅನಂತಕುಮಾರ್ ಅವರ ಹೆಸರನ್ನು ಚಿರಸ್ಥಾಯಿಗೊಳಿಸಲು ರಾಜ್ಯಸರ್ಕಾರದ ಸಹಕಾರದಿಂದ ಈ ಭಾಗದಲ್ಲಿ ಕ್ಯಾನ್ಸರ್ ಆಸ್ಪತ್ರೆಯೊಂದನ್ನು ಸ್ಥಾಪಿಸಲು ಪ್ರಯತ್ನ ನಡೆಸುತ್ತೇವೆ. ಇದು ಅವರ ಕೊನೆಯ ಆಸೆಯೂ ಆಗಿತ್ತು. ಅದಕ್ಕೆ ಅವರ ಹೆಸರಿಡಬೇಕೆಂದು ಬಯಸಿದ್ದೇವೆ. ಇಲ್ಲಿ ಸ್ಥಾಪಿಸಲು ಉದ್ದೇಶಿಸಲಾದ ಕ್ರೀಡಾ ಸಮುಚ್ಚಯಕ್ಕೆ ಸಹ ಅವರ ಹೆಸರನ್ನು ಇಡಲಾಗುವುದು. ಈ ಸಂದರ್ಭದಲ್ಲಿ ಅಗತ್ಯಕ್ಕಿಂತ ಹೆಚ್ಚು ಮಾತನಾಡದೇ ನಿಷ್ಠೆಯಿಂದ ಕೆಲಸದಲ್ಲಿ ತೊಡಗಿಕೊಳ್ಳುವುದೇ ನಾವು ಅವರಿಗೆ ನೀಡುವ ಶ್ರದ್ಧಾಂಜಲಿ ಎಂದು ನಾನು ಭಾವಿಸುತ್ತೇನೆ.

# ನೀರು ಮತ್ತು ನಮ್ಮ ಭವಿಷ್ಯ

ಹೆಚ್.ಎನ್.ಎ. ಪ್ರಸಾದ್

"ಗಂಗೇ ಯಮುನೇ ಚೈವ ಗೋದಾವರೀ ಸರಸ್ವತೀ| ನರ್ಮದಾ ಸಿಂಧು ಕಾವೇರೀ ಜಲೇ ಅಸ್ಮಿನ್ ಸನ್ನಿಧಿಂ ಕುರು" ಎನ್ನುವುದು ದಿನನಿತ್ಯದ ಸಾಂಪ್ರದಾಯಿಕ ಸ್ತೋತ್ರಗಳಲ್ಲೊಂದು. "ನಮಾಮಿ ಗಂಗೇ" ಎಂಬುದು ಇತ್ತೀಚೆಗೆ ಮಾನ್ಯ ಪ್ರಧಾನಮಂತ್ರಿಯವರು ಕೈಗೆತ್ತಿಕೊಂಡಿರುವ ಒಂದು . ಮಹತ್ವಾಕಾಂಕ್ಷೆಯ ಯೋಜನೆಯೂ ಆಗಿದೆ. ಗಂಗೆಯಂತೆಯೇ ದಕ್ಷಿಣಭಾರತದಲ್ಲಿ ಪೌರಾಣಿಕ ಪ್ರಸಿದ್ಧಿ ಪಡೆದ ನದಿ - ಕಾವೇರಿ. ಆದರೆ, ಕರ್ನಾಟಕದಲ್ಲಿ ಹರಿಯುವ ಪ್ರಮುಖ ನದಿಗಳಲ್ಲೊಂದಾದ ಕಾವೇರಿಯ ಪರಿಸ್ಥಿತಿ ಉತ್ತಮವಾಗೇನೂ ಇಲ್ಲ. ವರ್ತಮಾನದಲ್ಲಿ ಪಶ್ಚಿಮಘಟ್ಟಗಳ ದುಸ್ಥಿತಿಯನ್ನು ಗಮನಿಸಿದರೆ "ನಮಾಮಿ ಕಾವೇರಿ" ಯಲ್ಲ; "ಸ್ಮರಾಮಿ ಕಾವೇರಿ" ಎಂದು ಹೇಳುವ ಕಾಲವೇ ಬಂದರೆ ಅಚ್ಚರಿಯಿಲ್ಲ.

ಜಲಮಾಲಿನ್ಯವನ್ನು ತಡೆಯಲು ನದಿಯನ್ನು ಸ್ವಚ್ಛ ಮಾಡುವುದೇನೋ ಸರಿ, ಆದರೆ ಅದಕ್ಕಿಂತ ನೀರಿನ ಸೆಲೆ ಬತ್ತದಂತೆ ಕಾಯ್ದುಕೊಳ್ಳುವುದು ಮುಖ್ಯ. ನೀರಿನ ಮೂಲಗಳೇ ನಾಶವಾಗುತ್ತಿರುವುದರಿಂದ ನದಿಗಳಲ್ಲಿ ನೀರಿನ ಹರಿವು ಕಡಿಮೆಯಾಗುತ್ತಿದೆ, ಬೇಸಿಗೆ ಕಾಲದಲ್ಲಂತೂ ನದಿಗಳು ಸಂಪೂರ್ಣ ಬತ್ತಿ ಹೋಗುತ್ತಿವೆ. ಬೇಸಿಗೆಯಲ್ಲಿ ಧರ್ಮಸ್ಥಳದ ಸ್ನಾನಘಟ್ಟದಲ್ಲಿ ನೀರೇ ಇರುವುದಿಲ್ಲ. ನೀರಿನ ಪ್ರಕೃತಿದತ್ತ ಮೂಲಗಳನ್ನು ಉಳಿಸಿಕೊಳ್ಳದೆ ಸಮುದ್ರದ ನೀರನ್ನು ಬಳಸುತ್ತೇವೆ ಎಂಬುದು ಹುಚ್ಚುತನ. ಹೀಗೆ ಮಾಡುತ್ತಿರುವ ದೇಶಗಳೆಲ್ಲ ಭಾರೀ ಆರ್ಥಿಕ ಹೊರೆಯನ್ನು ಅನುಭವಿಸುತ್ತಿವೆ.

ಕಾರ್ಖಾನೆಗಳ ಅನೇಕ ಉತ್ಪನ್ನಗಳಂತೆ ನೀರು ಕೂಡ ಒಂದು ಉತ್ಪನ್ನ ಎಂಬುದನ್ನು ನಾವು ಮರೆಯುತ್ತಿದ್ದೇವೆ. ಪರಿಸರವೇ ನೀರನ್ನು ತಯಾರಿಸುವ ಕಾರ್ಖಾನೆ. ತಂತ್ರಜ್ಞಾನದಲ್ಲಿ ಬಹಳ ಮುಂದುವರೆದಿರುವ ನಾವು ಅಂತರ್ಜಲ, ಮಿತಬಳಕೆ, ನೀರಿನ ರಕ್ಷಣೆ ಮುಂತಾಗಿ ಮಾತನಾಡುತ್ತಿದ್ದೇವೆ. ಆದರೆ ನೀರು ಎಷ್ಟು ಕಡಿಮೆಯಾಗಿದೆ, ಭವಿಷ್ಯದಲ್ಲಿ ಕೊರತೆಯ ಸ್ವರೂಪ ಹೇಗಿರಬಹುದು ಎಂದು ನಾವು ಯೋಚಿಸುತ್ತಿಲ್ಲ. ನೀರನ್ನು ತಯಾರಿಸುವ ಪರಿಸರವೆಂಬ ಕಾರ್ಖಾನೆಯನ್ನು ಕಾಪಾಡಿಕೊಳ್ಳಬೇಕಾಗಿರುವುದು ಇಂದಿನ ಅಗತ್ಯ.

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು 18000 ಹಳ್ಳಿಗಳಿಗೆ ವಿದ್ಯುತ್ ಕೊಡುವ ಘೋಷಣೆಗೆ ಮೊದಲು ಅದಕ್ಕೆ ಬೇಕಾಗುವಷ್ಟು ವಿದ್ಯುತ್ ಉತ್ಪಾದನೆಯ ಕಡೆಗೆ ಗಮನ ಕೊಟ್ಟಿದ್ದರು. ಇದರಿಂದಾಗಿ 2014ರಲ್ಲಿ ವಿದ್ಯುತ್ ಕೊರತೆ ಅನುಭವಿಸುತ್ತಿದ್ದ ದೇಶದಲ್ಲಿ 2017ರ ಹೊತ್ತಿಗೆ ವಿದ್ಯುತ್ತಿನ ಉತ್ಪಾದನೆ ನಮಗೆ ಬೇಕಾಗಿದ್ದಕ್ಕಿಂತ ಹೆಚ್ಚಳವಾಯಿತು. ಅದೇ ರೀತಿ ನೀರಿನ ವ್ಯಯ, ದುರ್ವ್ಯಯಗಳ ಚರ್ಚೆಗಿಂತ ಮೊದಲು ನೀರಿನ ಉತ್ಪಾದನೆಯತ್ತ ಗಮನ ಹರಿಸಬೇಕಾಗಿದೆ.

1967ಕ್ಕೆ ಮುನ್ನ, ಬೆಂಗಳೂರಿನ ಮಲ್ಲೇಶ್ವರದಲ್ಲಿ ಎಲ್ಲರೂ ಬಾವಿಯ ನೀರನ್ನೇ ಬಳಸುತ್ತಿದ್ದರು. ಪ್ರತಿಯೊಬ್ಬರ ಮನೆಯಲ್ಲಿಯೂ ಒಂದೊಂದು ಬಾವಿ ಮತ್ತು ತೊಟ್ಟಿ ಇರುತ್ತಿತ್ತು. ಮುಂದೆ ನಲ್ಲಿಯಲ್ಲಿ ನೀರು ಸರಬರಾಜು ವ್ಯವಸ್ಥೆ ಪ್ರಾರಂಭವಾಯಿತು. ಆಗ ಪ್ರತಿಯೊಬ್ಬರ ಮನೆಯಲ್ಲಿಯೂ ಇದ್ದದ್ದು ಒಂದೊಂದೇ ನಲ್ಲಿ! ನೀರು ಬರುತ್ತಿದ್ದದ್ದು ದಿನದಲ್ಲಿ ಕೇವಲ ಅರ್ಧ ಗಂಟೆ ಮಾತ್ರ. ಆ ಅರ್ಧ ಗಂಟೆಯಲ್ಲಿ ನಾವು ಪಾತ್ರೆಗಳಲ್ಲಿ, ತೊಟ್ಟಿಗಳಲ್ಲಿ ನೀರು ತುಂಬಿಸಿ ಇಟ್ಟುಕೊಳ್ಳಬೇಕಾಗಿತ್ತು. ಅಂದಿನ ಕಾಲದಲ್ಲಿ ಮನೆಗಳೂ ಚಿಕ್ಕದಾಗಿದ್ದವು. ಪ್ರತಿಯೊಂದು ಮನೆಯಲ್ಲಿಯೂ 20 ರಿಂದ 25 ಜನರ ದೊಡ್ಡ ಸಂಸಾರವೇ ವಾಸ ಮಾಡುತ್ತಿತ್ತು. ಆದುದರಿಂದ ನಲ್ಲಿಯ ನೀರನ್ನು ಕುಡಿಯುವುದಕ್ಕೆ ಮಾತ್ರ ಬಳಸಿ ಉಳಿದ ಅಗತ್ಯಗಳಿಗೆ ಬಾವಿನೀರನ್ನು ಬಳಸಿಕೊಳ್ಳುತ್ತಿದ್ದೆವು. ಇದಾಗಿ ಕೇವಲ 50 ವರ್ಷಗಳು ಕಳೆದಿವೆ; ನಾವು ಬಾವಿಯ ನೀರನ್ನು ಮರೆತೇ ಬಿಟ್ಟಿದ್ದೇವೆ.

ಬೆಂಗಳೂರಿನಲ್ಲಿ ನೀರು ಸರಬರಾಜು ವ್ಯವಸ್ಥೆ ಪ್ರಾರಂಭವಾಗಿದ್ದು 1894ರಲ್ಲಿ. ಬ್ರಿಟಿಷರು ಬೆಂಗಳೂರಿನಲ್ಲಿ ತಮ್ಮ ಸೇನಾನೆಲೆಯನ್ನು ಸ್ಥಾಪಿಸಿದಾಗ ಹೆಸರಘಟ್ಟದಲ್ಲಿ ಒಂದು ಸಣ್ಣ ಅಣೆಕಟ್ಟು ಕಟ್ಟಿ ನೀರು ಸರಬರಾಜು ಪ್ರಾರಂಭಿಸಿದರು. ಮಿತವಾಗಿ ಸರಬರಾಜು ಮಾಡುತ್ತಿದ್ದ ಕಾಲಕ್ಕೆ ಅದರ ನೀರು ಬೆಂಗಳೂರಿಗೆ ಸಾಕಾಗುತ್ತಿತ್ತು. ಮುಂದೆ 1933ರಲ್ಲಿ ಅರ್ಕಾವತಿ ನದಿಗೆ ತಿಪ್ಪಗೊಂಡನ ಹಳ್ಳಿಯಲ್ಲಿ ಒಡ್ಡು ಕಟ್ಟಿ ಬೆಂಗಳೂರಿಗೆ ನೀರು ಸರಬರಾಜು ಪ್ರಾರಂಭಿಸಲಾಯಿತು. 1972ರ ನಂತರ, ಬೆಳೆಯುತ್ತಿರುವ ಬೆಂಗಳೂರಿಗೆ ಕಾವೇರಿ ನದಿಯಿಂದ ವಿವಿಧ ಹಂತಗಳಲ್ಲಿ ನೀರನ್ನು ತರಲಾಯಿತು.

ತಿಪ್ಪಗೊಂಡನಹಳ್ಳಿಯಿಂದ ನೀರು ಇಂದಿಗೂ ಸರಬರಾಜಾಗುತ್ತಿದೆ. ಆದರೆ ತಿಪ್ಪಗೊಂಡನ ಹಳ್ಳಿ ಜಲಾಶಯಕ್ಕೆ ನೀರು ತರುವ ಅರ್ಕಾವತಿ ನದಿಯ ಜಲಾನಯನ ಪ್ರದೇಶದಲ್ಲಿ ವ್ಯತ್ಯಯವಾಗಿದೆ. ನಂದಿ ಬೆಟ್ಟದಿಂದ ಬೆಂಗಳೂರು ನಗರದ ನಡುವಣ 800 ಚದರ ಕಿಲೋಮೀಟರ್ ವ್ಯಾಪ್ತಿಯಲ್ಲಿ ಬೀಳುವ ಮಳೆನೀರು ಬಳಕೆಯಾಗದೆ ವ್ಯರ್ಥವಾಗುತ್ತಿದೆ, ಅಥವಾ




ಬೆಂಗಳೂರಿನ ನಿವಾಸಿ ಶ್ರೀ ಹೆಚ್.ಎನ್. ಎ. ಪ್ರಸಾದ್ ಪರಿಸರ ಮತ್ತು ವನ್ಯಜೀವಿ ಸಂರಕ್ಷಣೆಯ ಬಗೆಗೆ ಅಪಾರ ಕಾಳಜಿಯುಳ್ಳವರು. ಅದಮ್ಯ ಚೇತನ ಸಂಸ್ಥೆಯ ಹಿರಿಯ ಸದಸ್ಯರೂ, ಸಮಾಜಸೇವಾ ಕಾರ್ಯಕರ್ತರೂ ಆಗಿರುವ ಶ್ರೀ ಪ್ರಸಾದ್ ಅನಂತಕುಮಾರರ ಆಪ್ತರಾಗಿದ್ದು, ರಾಜಸ್ಥಾನದ ಜೋಧಪುರವೂ ಸೇರಿದಂತೆ ಅದಮ್ಯಚೇತನದ ವಿವಿಧ ಅಡುಗೆ ಕೇಂದ್ರಗಳ ಸ್ಥಾಪನೆ, ಕಾರ್ಯ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಕಳೆದ ಮಾರ್ಚ್ ೨೨, ೨೦೨೧ ರಂದು 'ಅನಂತಪಥ'ದ ಒಂಬತ್ತನೆಯ ಸಂಚಿಕೆಯನ್ನು ಬಿಡುಗಡೆ ಮಾಡಿ ಮಾತನಾಡಿದ ಶ್ರೀ ಹೆಚ್.ಎನ್.ಎ. ಪ್ರಸಾದರು ತಮ್ಮ ಮತ್ತು ದಿವಂಗತ ಶ್ರೀ ಅನಂತಕುಮಾರರ ಒಡನಾಟವನ್ನು ಸ್ಮರಿಸಿಕೊಂಡರು. ಈ ಸಂದರ್ಭದಲ್ಲಿ " ನೀರು ಮತ್ತು ನಮ್ಮ ಭವಿಷ್ಯ " ಎಂಬ ವಿಷಯವನ್ನು ಕುರಿತು ಶ್ರೀ ಪ್ರಸಾದ್ ಮಾಡಿದ ಭಾಷಣದ ಪ್ರಮುಖ ಅಂಶಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ತಿಪ್ಪಗೊಂಡನಹಳ್ಳಿಯವರೆಗೆ ಹೋಗಿ ಬೆಂಗಳೂರಿಗೆ ಮರಳಿ ಬರುತ್ತಿದೆ. ತಿಪ್ಪಗೊಂಡನ ಹಳ್ಳಿ ಮತ್ತು ಕಾವೇರಿಯ ನಾಲ್ಕು ಹಂತಗಳ ಯೋಜನೆ ಮುಗಿದ ಮೇಲೂ ಜಲಮಂಡಳಿಯು ಬೆಂಗಳೂರಿನ ಶೇ 40ರಷ್ಟು ಪ್ರದೇಶಗಳಿಗೆ ಮಾತ್ರ ನೀರು ಸರಬರಾಜು ಮಾಡುತ್ತಿದೆ. ಉಳಿದ ಶೇ 60ರಷ್ಟು ಪ್ರದೇಶಗಳಿಗೆ ನೀರು ಪೂರೈಸಲು ಸರಕಾರ ವಿಫಲವಾಗಿರುವುದಷ್ಟೇ ಅಲ್ಲ, ಆ ಪ್ರದೇಶಗಳಲ್ಲಿ ಕಟ್ಟಿರುವ ಮನೆಗಳಿಗೆ ನೀರು ಪೂರೈಕೆ ಮಾಡುವುದು ನಮ್ಮ ಜವಾಬ್ದಾರಿಯಲ್ಲ ಎಂದು ಖರೀದಿ ದಸ್ತಾವೇಜಿನಲ್ಲಿಯೇ ತಿಳಿಸಲಾಗಿರುತ್ತದೆ. ಹೀಗೆ ಬೆಂಗಳೂರಿನ ಶೇ 60ರಷ್ಟು ಮನೆಗಳು ನೀರು ಸರಬರಾಜು ವ್ಯವಸ್ಥೆಯಿಲ್ಲದೆ ನಿರ್ಮಾಣಗೊಂಡಿವೆ. ಅವರಿಗೆ ನೀರು ಎಲ್ಲಿಂದ ಬರುತ್ತಿದೆ? ಇದು ನಾವು ಸೂಕ್ಷ್ಮವಾಗಿ ಗಮನಿಸಬೇಕಾಗಿರುವ ವಿಷಯ.

ಕರ್ನಾಟಕ ರಾಜ್ಯಕ್ಕೆ ಪಶ್ಚಿಮ ಘಟ್ಟಗಳೇ ಮಳೆಯ ಹೆಬ್ಬಾಗಿಲು. ಆ ಘಟ್ಟಗಳು ನೀರನ್ನು ಇಂಗಿಸಿ ದೊಡ್ಡದೊಡ್ಡ ಜಲಾಶಯಗಳಲ್ಲಿ ಶೇಖರಿಸುತ್ತಿದ್ದವು. ದೊಡ್ಡ ಜಲಾಶಯಗಳಿಂದ ಸಣ್ಣ ಸಣ್ಣ ಕೆರೆಗಳಿಗೆ ನೀರು ಹರಿಯುತ್ತಿತ್ತು. ಪಶ್ಚಿಮ ಘಟ್ಟಗಳು ನಶಿಸಿ ಜಲಾಶಯಗಳಿಗೆ ನೀರಿನ ಮೂಲವೇ ಬತ್ತಿ ಹೋಗಿದೆ. ವಾರ್ಷಿಕವಾಗಿ ಬೀಳುವ ಮಳೆಯ ಪ್ರಮಾಣದಲ್ಲಿ ಎಂದೂ ಕಡಿಮೆಯಾಗುವುದಿಲ್ಲ. ಆವಿಯಾದ ನೀರು ಮೋಡವಾಗಿ ಮಳೆ ಸುರಿಯಲೇ ಬೇಕು. ಹೀಗಾಗಿ ಭೂಮಿಯ ಮೇಲೆ ಸುರಿಯುವ ಮಳೆ ಕಡಿಮೆಯಾಗಿಲ್ಲ. ಆದರೆ, ಪಶ್ಚಿಮ ಘಟ್ಟಗಳ ನಾಶದಿಂದ ಭಾರತದಲ್ಲಿ ಮಳೆಯ ವಿತರಣೆಯ ವ್ಯವಸ್ಥೆಯಲ್ಲಿ ಪರಿವರ್ತನೆಯಾಗಿದೆ. ಭೂಮಿಯ ಮೇಲೆ ಬೀಳುವ ನೀರು ವರ್ಷವಿಡೀ ಬೀಳುತ್ತಿರಬಹುದು, ಸಮುದ್ರದ ಮೇಲೆ ಬೀಳುತ್ತಿರಬಹುದು, ಪ್ರವಾಹವಾಗಿ ಹರಿದು ಹೋಗುತ್ತಿರಬಹುದು ಅಥವ ಇನ್ನೆಲ್ಲೋ ಕ್ಷಾಮ ಉಂಟಾಗುತ್ತಿರಬಹುದು. ಇಂದು ನಾವು ಅನುಭವಿಸುತ್ತಿರುವ ಈ ಎಲ್ಲ ಸಮಸ್ಯೆಗಳಿಗೆ ಪಶ್ಚಿಮ ಘಟ್ಟಗಳನ್ನು ನಾಶಪಡಿಸಿರುವುದೇ ಕಾರಣ.

ಬೆಂಗಳೂರಿಗೆ ನೀರಿನ ಇನ್ನೊಂದು ಪ್ರಮುಖ ಮೂಲ ಪೂರ್ವಘಟ್ಟಗಳು. ನಂದಿ ಕಣಿವೆಯಲ್ಲಿ ಅರ್ಕಾವತಿಯೇ ಮೊದಲಾದ ಆರು ನದಿಗಳು ಹುಟ್ಟುತ್ತವೆ. ಅಲ್ಲಿನ ಬಂಡೆಗಳಲ್ಲಿ ಸಣ್ಣ ಸಣ್ಣ ರಂಧ್ರಗಳಿದ್ದು ಅವು ನದಿಯ ನೀರನ್ನು ಶೇಖರಿಸಿಟ್ಟುಕೊಂಡಿರುತ್ತವೆ. ನಂತರ ಈ ನೀರು ಬೇಸಿಗೆ ಕಾಲದಲ್ಲಿ ಉಷ್ಣಾಂಶದ ವ್ಯತ್ಯಾಸದಿಂದ ಬಂಡೆಗಳಿಂದ ಜಿನುಗುತ್ತದೆ. ಈ ನೀರು ವರ್ಷವಿಡೀ ಹರಿದು ನದಿಗಳನ್ನು ಜೀವಂತವಾಗಿರಿಸುತ್ತದೆ. ಇಂದು ಪೂರ್ವಘಟ್ಟದ ಕಾಡುಗಳು ಕಾಳ್ಗಿಚ್ಚಿಗೆ ಬಲಿಯಾಗಿ ಅಲ್ಲಿಂದ ಹುಟ್ಟುವ ಜೀವಂತ ನದಿಗಳು, ಝರಿಗಳು ಮಾಯವಾಗಿ ನೀರಿನ ಕೊರತೆಯುಂಟಾಗಿದೆ. ಈ ರೀತಿಯಾಗಿ ಪಶ್ಚಿಮ ಘಟ್ಟ ಮತ್ತು ಪೂರ್ವ ಘಟ್ಟಗಳ ನಾಶದಿಂದ ನದಿಗಳಲ್ಲಿ ನೀರಿನ ಹರಿವು ನಿಂತುಹೋಯಿತು. ನದಿಗಳ ನೀರನ್ನು ಹಿಡಿದಿಟ್ಟುಕೊಳ್ಳುತ್ತಿದ್ದ

ಪುಟ 8 ರಲ್ಲಿ ಮುಂದುವರೆದಿದೆ

# ನೀರು ಮತ್ತು ನಮ್ಮ ಭವಿಷ್ಯ

ಪುಟ 7 ರಿಂದ

ಜಲಾಶಯಗಳು ಒಣಗಿ ಹೋದವು. ಇಂದು ಬೆಂಗಳೂರಿನಲ್ಲಿ ಕೆರೆಗಳ ಪುನಶ್ಚೇತನ ಎಂದು ಓಡಾಡುತ್ತಿದ್ದಾರೆ. ಆದರೆ ಬೆಂಗಳೂರಿನ ಕೆರೆಗಳಿಗೆ ನೀರು ಒದಗಿಸುವ ಜಲಾನಯನ ಪ್ರದೇಶಗಳೇ ಇಲ್ಲ, ಝರಿಗಳೇ ಇಲ್ಲ. ಝರಿಗಳು, ನದಿಗಳು ಪುನಶ್ಚೇತನಗೊಂಡಾಗ ಕೆರೆಗಳು ತಾವೇತಾವಾಗಿ ಪುನಶ್ಚೇತನಗೊಳ್ಳುತ್ತವೆ.

ಬೆಟ್ಟಗಳು ಶೇಖರಿಸಿದ ನೀರು ನದಿಗಳ, ಝರಿಗಳ ಮೂಲಕ ಹರಿಯುವುದು ಒಂದು ವಿಚಾರವಾದರೆ ಅಂತರ್ಜಲದ ಹರಿವು ಇನ್ನೊಂದು ವಿಚಾರ. ಬಿದ್ದ ಮಳೆನೀರನ್ನು ಭೂಮಿ ಹೀರಿಕೊಂಡು ಭೂಮಿಯ ಮೇಲ್ಪದರಗಳಲ್ಲಿ ಶೇಖರವಾಗುವ ಭೂಜಲದ ಪ್ರಮಾಣ ಬೆಂಗಳೂರಿನಲ್ಲಿ ಇಂದಿಗೂ ಅಷ್ಟೇ ಇದೆ. ಇಂದಿಗೂ ಬಾವಿಗಳನ್ನು ತೋಡಿದರೆ ನೀರು ಬರುತ್ತದೆ, ನೀರನ್ನು ತೆಗೆದಷ್ಟೂ ಮತ್ತೆ ತುಂಬಿಕೊಳ್ಳುತ್ತದೆ. ಆದರೆ ಭೂಮಿಯ ತಳದಲ್ಲಿರುವ ಬಂಡೆಗಳ ಕೆಳಗೆ ಹರಿಯುವುದು ಅಂತರ್ಜಲ. ನಾವು ಬೆಂಗಳೂರಿನಲ್ಲಿ ಕೊರೆದ ಕೊಳವೆ ಬಾವಿಗೆ ಇಂಡೋನೇಷ್ಯಾದಿಂದಲೋ, ಬ್ರೆಜಿಲ್ ನಿಂದಲೋ ನೀರು ಹರಿದು ಬರಬಹುದು. ಬಂಡೆಗಳ ಕೆಳಗೆ ಈ ಅಂತರ್ಜಲ ಶೇಖರಣೆಯಾಗಲು ಲಕ್ಷಾಂತರ ವರ್ಷಗಳೇ ಬೇಕಾಗಿದ್ದಿರಬಹುದು. ಬೆಂಗಳೂರಿನ ಶೇ 60ರಷ್ಟು ಭಾಗವು ನೀರಿಗಾಗಿ ಕೊಳವೆ ಬಾವಿಗಳನ್ನು ಆಶ್ರಯಿಸಿದೆ. ಅಧಿಕೃತ ಬಡಾವಣೆಗಳನ್ನು ಬಿಟ್ಟರೆ ಇಂದಿನ ಐಟಿ ಕಾರಿಡಾರ್ ಸೇರಿದಂತೆ ಬಿಸಿಎ ಮಾನ್ಯತೆ ಪಡೆದ ಬಡಾವಣೆಗಳಲ್ಲಿ ನೀರಿನ ಸರಬರಾಜು ಇರುವುದಿಲ್ಲ. ಹೀಗಾಗಿ ದೊಡ್ಡ ದೊಡ್ಡ ನಿರ್ಮಾತೃಗಳು ತಮ್ಮ ಬಡಾವಣೆಗಳಲ್ಲಿ ನೀರಿಗಾಗಿ ಕೊಳವೆ ಬಾವಿಗಳನ್ನು ಕೊರೆದರು. ಆದರೆ ಬಹುಬೇಗ, ಈ ಕೊಳವೆ ಬಾವಿಗಳೆಲ್ಲ ಬತ್ತಿ ಹೋದವು. ಹೀಗಾಗಿ ಇಂದು ಅವರು ನೀರಿಗಾಗಿ ಕೋಲಾರದಿಂದ ಅರವತ್ತು ಕಿಲೋಮೀಟರ್ ದೂರದ ಮುಳಬಾಗಿಲಿನ ವರೆಗೆ ನೀರನ್ನು ಅರಸಿಕೊಂಡು ಹೋಗುತ್ತಿದ್ದಾರೆ. ಇತ್ತಕಡೆ ರಾಮನಗರ, ಮಾಗಡಿ, ಹೆಸರಘಟ್ಟದ ವರೆಗೆ ಹೋಗುತ್ತಿದ್ದಾರೆ. ಇಂದು ಬೆಂಗಳೂರಿನಲ್ಲಿ ಸುಮಾರು 10000 ನೀರಿನ ಟ್ಯಾಂಕರ್ ಗಳಿವೆ. ಒಂದು ಟ್ಯಾಂಕರ್ ನೀರಿಗೆ 15000 ರೂಪಾಯಿ ವಸೂಲಿ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ ಅಂತರ್ಜಲ ಬರಿದಾಗಿದೆ.


ಕಮ್ಯೂನಿಸ್ಟ್ ಆಳ್ವಿಕೆ ಇರುವ ಕೇರಳದಲ್ಲಿ ಮೂವತ್ತು ವರ್ಷಗಳ ಹಿಂದೆಯೇ ಕೊಳವೆ ಬಾವಿ ಕೊರೆಯುವುದನ್ನು ನಿಷೇಧಿಸಿದ್ದಾರೆ. ಅದೇ ಕೇರಳದ ಜನರು ಬೆಂಗಳೂರಿಗೆ ಬಂದು ಕೊಳವೆ ಬಾವಿ ಕೊರೆಯುತ್ತಿದ್ದಾರೆ. ಇಂದು ಸಕಲೇಶಪುರ, ಶಿರಸಿಗಳ ಕೊಳವೆಬಾವಿಗಳಲ್ಲಿಯೂ ನೀರು ಬತ್ತಿಹೋಗಿದೆ. ಅಲ್ಲಿನ ಜಲಕ್ಷಾಮದ ಬಿಸಿ ಬೆಂಗಳೂರಿಗೆ ಇನ್ನೂ ತಟ್ಟಿಲ್ಲ. ಕಾರಣ, ಅಂತರ್ಜಲ ಗುರುತ್ವಾಕರ್ಷಣ ಶಕ್ತಿಯ ಬಲದಿಂದ ಹರಿಯುತ್ತದೆ. ಹೀಗಾಗಿ ಎತ್ತರದ ಪ್ರದೇಶಗಳಲ್ಲಿ, ಬೆಟ್ಟಪ್ರದೇಶಗಳಲ್ಲಿ ಮೊದಲು ನೀರಿನ ಕ್ಷಾಮ ತಲೆದೋರುತ್ತದೆ. ಇದರ ಬಿಸಿ ಬೆಂಗಳೂರಿಗೆ ಕೊಟ್ಟಕೊನೆಯಲ್ಲಿ ತಾಗುತ್ತದೆ. ಬಳಕೆಯ ಪ್ರಮಾಣ ಅಧಿಕವಾದಂತೆ ನದಿಗಳಿಂದ ನಗರಗಳಿಗೆ ಹರಿಸುವ ನೀರಿನ ಪ್ರಮಾಣವೂ ಹೆಚ್ಚಾಗುತ್ತಿದೆ. ಬೆಂಗಳೂರಿನಲ್ಲಿ ಇರುವ ಬಾವಿಗಳನ್ನು ಉಪಯೋಗಿಸದೆ ಭೂಮಿಯನ್ನು ಕೊರೆದು ಅಂತರ್ಜಲವನ್ನು ಬರಿದು ಮಾಡಿರುವುದರ ಜೊತೆಗೆ ಹಳ್ಳಿಗಳಲ್ಲಿಯೂ ಕೊಳವೆಬಾವಿಗಳನ್ನು ಕೊರೆದು ಬಾವಿಗಳನ್ನು ಬತ್ತಿಸಿದ್ದೇವೆ. ಇದರ ಕುರಿತು ನಾವು ಚಿಂತಿಸುವ ಕಾಲ ಬಂದಿದೆ.

ಈ ನಿಟ್ಟಿನಲ್ಲಿ ನಮ್ಮ ನೀರಿನ ಸಂಗ್ರಹ ಸಾಮರ್ಥ್ಯ ಹೆಚ್ಚಿಸಿಕೊಳ್ಳಬೇಕು. ಸದ್ಗುರು ಜಗ್ಗಿ ವಾಸುದೇವ್ ಅವರು ಕೃಷ್ಣಾ ನದಿಯ ನೀರು ವರ್ಷದಲ್ಲಿ ಎರಡೇ ತಿಂಗಳುಗಳ ಕಾಲ ಸಮುದ್ರದ ವರೆಗೆ ಪ್ರವಹಿಸುತ್ತದೆ ಎಂಬ ಸತ್ಯವನ್ನು ನಮ್ಮ ಮುಂದಿರಿಸಿದ್ದಾರೆ. ಕೃಷ್ಣಾ ನದಿಯ ನೀರನ್ನು ಆಲಮಟ್ಟಿ, ವಿಜಯಪುರ, ಬೀದರ ಜಿಲ್ಲೆಯ ನಾಲ್ಕು ಅಣೆಕಟ್ಟುಗಳು, ಶ್ರೀಶೈಲಂ, ತುಂಗಭದ್ರಾ, ಭದ್ರಾ, ನಾಗಾರ್ಜುನ ಸಾಗರ ಅಣೆಕಟ್ಟುಗಳಲ್ಲಿ ಒಟ್ಟು 1200 ಟಿಎಂಸಿ ನೀರನ್ನು ತಡೆದು ನಿಲ್ಲಿಸಲಾಗಿದೆ. ನಾಗಾರ್ಜುನ ಸಾಗರವನ್ನು ಕಟ್ಟಿದ ಮೇಲೆ ಇದುವರೆಗೆ ಕೇವಲ ಮೂರು ಬಾರಿ ತುಂಬಿದೆ. ಹೀಗಿರುವಾಗ ಕೃಷ್ಣಾ ನದಿಯ ನೀರು ಸಮುದ್ರವನ್ನು ಸೇರುವುದು ಹೇಗೆ ಸಾಧ್ಯ? ಪಶ್ಚಿಮ ಘಟ್ಟಗಳನ್ನು ಪುನಶ್ಚೇತನಗೊಳಿಸಿದರೆ ಇದೂ ಸಾಧ್ಯವಾಗುತ್ತದೆ. ಬೆಂಗಳೂರಿಗೆ ಬೇಕಾಗಿರುವುದು 16 ಟಿಎಂಸಿ ನೀರು ಮಾತ್ರ. ಅದರ 75 ಪಟ್ಟು ಹೆಚ್ಚು ನೀರು ಕೃಷ್ಣಾ ನದಿಯ ಅಣೆಕಟ್ಟುಗಳಲ್ಲಿ ಸಂಗ್ರಹವಾಗುತ್ತಿದೆ. ಆದರೆ ಕಾವೇರಿ ನದಿಯ ಕೃಷ್ಣರಾಜಸಾಗರ ಅಣೆಕಟ್ಟಿನ ಸಂಗ್ರಹ ಸಾಮರ್ಥ್ಯ ಕೇವಲ 49 ಟಿಎಂಸಿ, ಹಾರಂಗಿ ಜಲಾಶಯದಲ್ಲಿ 8 ಟಿಎಂಸಿ. ದಾವಣಗೆರೆಯ ಸೂಳೆಕೆರೆಯ ಸಾಮರ್ಥ್ಯವೂ 3.5 ಟಿಎಂಸಿ. ಕಾವೇರಿ ನದಿಯ ಒಟ್ಟು ನೀರಿನಲ್ಲಿ ನಾವು ಸಂಗ್ರಹಿಸಿರುವುದು 123 ಟಿಎಂಸಿ ಮಾತ್ರ.

ಕಳೆದ ಕೆಲವು ವರ್ಷಗಳಿಂದ ಕೊಡಗು ಜಿಲ್ಲೆಯಲ್ಲಿ ನಡೆಯುತ್ತಿದ್ದ ಇಂಜನಿಯರಿಂಗ್ ಕಾಮಗಾರಿಗಳು ಮಾಡಿದ ಸ್ಟ್ರಕ್ಚರಲ್ ಹಾನಿಯಿಂದಾಗಿ 2018ರಲ್ಲಿ ಅನಾಹುತ ಸಂಭವಿಸಿತು. ಒಂದೇ ವರ್ಷದಲ್ಲಿ ಅದು ಹಾಸನ, ಉತ್ತರಕನ್ನಡ ಜಿಲ್ಲೆಗಳ ವರೆಗೂ ವ್ಯಾಪಿಸಿತು. ಕಳೆದ ಎರಡು ವರ್ಷಗಳಿಂದ ವಿಜಯಪುರ, ಬೀದರ ಜಿಲ್ಲೆಗಳಲ್ಲಿ ಪ್ರವಾಹ ಉಂಟಾಗಿತ್ತು. ಇಂತಹ ಪ್ರವಾಹಗಳನ್ನು ತಡೆಯುವ ಯಾವ ಯೋಜನೆಯೂ ನಮ್ಮಲ್ಲಿಲ್ಲ.

ಕರ್ನಾಟಕದಲ್ಲಿ ಶೇ. 23 ಭಾಗ ಅರಣ್ಯವಿದೆ ಎಂದು ಹೇಳುತ್ತಾರೆ. ಆದರೆ ನಿಜವಾಗಿ ಶೇ 3 ಭಾಗದಲ್ಲಿಯೂ ಅರಣ್ಯವಿಲ್ಲ. ಶೇ 20 ಭಾಗ ಬರಡು ಭೂಮಿಯಾಗಿದೆ. ಕಾಡುಗಳನ್ನು ಕೃತಕವಾಗಿ ಬೆಳೆಸುವುದು ಸಾಧ್ಯವಿಲ್ಲ. ನಾವು ಕೇವಲ ಎರಡು ವರ್ಷ ಈ ಬರಡುಭೂಮಿಯಲ್ಲಿ ಪ್ರವೇಶ ಮಾಡದಿದ್ದರೆ ಸಾಕು. ಅಲ್ಲಿ ಗಿಡಮರಗಳು ಬೆಳೆದು ಮಳೆನೀರು ಭೂಮಿಯಲ್ಲಿ ಇಂಗುವಂತಾಗುತ್ತದೆ. ನಮ್ಮ ಪಶ್ಚಿಮಘಟ್ಟ, ಪೂರ್ವಘಟ್ಟ, ವಿಂಧ್ಯಾ, ಅರಾವಳಿ, ಹಿಮಾಲಯಗಳಲ್ಲಿ ಕಾಡು ಬೆಳೆದು ನೀರು ಶೇಖರಣೆಯಾಗುತ್ತದೆ. ಶೇ. 20 ಭಾಗವನ್ನು ಭೂಮಾಫಿಯಾಗಳ ಕೈಯಿಂದ ತಪ್ಪಿಸಿದರೆ ಎರಡೇ ವರ್ಷಗಳಲ್ಲಿ ಅರಣ್ಯಗಳು ಬೆಳೆದುಕೊಂಡು ಜಲಸಮೃದ್ಧಿಯಾಗುತ್ತದೆ. ಇದಕ್ಕೆ ಒಂದು ಜೀವಂತ ಉದಾಹರಣೆ, ಸಾವನದುರ್ಗ. ಅಲ್ಲಿ ಕಾಡಿನ ವಿಸ್ತೀರ್ಣದಲ್ಲಿ ಹೆಚ್ಚಳವಾಗಿದ್ದು ಅಂತರ್ಜಲದಲ್ಲಿಯೂ ವೃದ್ಧಿಯಾಗಿದೆ. ನಂದಿ ಬೆಟ್ಟದ ಪರಿಸರದಲ್ಲಿ ಬೀಳುವ ಬೆಂಕಿಯನ್ನು ನಿಲ್ಲಿಸಿದರೆ ಎರಡೇ ವರ್ಷಗಳಲ್ಲಿ ಆರು ನದಿಗಳು ಮತ್ತೆ ಹರಿಯತೊಡಗುತ್ತವೆ. ಹೀಗಾಗಿ, ನಾವು ಇಂದು ನೈಸರ್ಗಿಕ ಸಂಗ್ರಹಾಗಾರಗಳಾಗಿರುವ ಪಶ್ಚಿಮ ಘಟ್ಟ, ಪೂರ್ವ ಘಟ್ಟ, ವಿಂಧ್ಯಾ, ಅರಾವಳಿ ಬೆಟ್ಟಗಳಲ್ಲಿ ನೀರಿನ ಶೇಖರಣೆಯನ್ನು ಹೆಚ್ಚಿಸಬೇಕು. ಅರಣ್ಯಗಳಲ್ಲಿ ಅಕೇಶಿಯಾ ಬೆಳೆಯುವುದನ್ನು ನಿಲ್ಲಿಸಿ, ಮಾನವ ಪ್ರವೇಶವನ್ನು ಸಂಪೂರ್ಣ ನಿಷೇಧಿಸಿದರೆ ಮಾತ್ರ ಈ ನೈಸರ್ಗಿಕ ಸಂಗ್ರಹಾಗಾರಗಳು ಪುನಶ್ಚೇತನಗೊಳ್ಳುತ್ತವೆ. ಇದನ್ನು ಬಿಟ್ಟು ಅನ್ಯ ಮಾರ್ಗವಿಲ್ಲ.

ನಾವು ಇಂದು ಎಚ್ಚೆತ್ತುಕೊಳ್ಳದಿದ್ದರೆ ಕೆಲವೇ ವರ್ಷಗಳಲ್ಲಿ ಭಾರತದಲ್ಲಿ, ಅಷ್ಟೇಕೆ, ಇಡೀ ಜಗತ್ತಿನಲ್ಲಿ ಜಲಕ್ಷಾಮದಿಂದ ಜನರು ಸಾಯುವುದು ನಿಶ್ಚಿತ. ನೈಸರ್ಗಿಕವಾದ ವಿಧಾನಗಳಿಂದ ನೀರನ್ನು ಉತ್ಪಾದಿಸುವ ಬಗ್ಗೆ ಗಮನ ಹರಿಸುವ ಬದಲು ಎಷ್ಟೇ ಕಾರ್ಖಾನೆಗಳನ್ನು ಸ್ಥಾಪಿಸಿದರೂ ಮುಂಬರುವ ಅನಾಹುತವನ್ನು ತಪ್ಪಿಸಲು ಸಾಧ್ಯವಿಲ್ಲ.



# ನಡೆನುಡಿಗಳಲ್ಲಿ ಕನ್ನಡತನ ಮೆರೆದ ಅನಂತಕುಮಾರ್

ಟಿ.ಎ. ನಾರಾಯಣ ಗೌಡ
ಅಧ್ಯಕ್ಷರು, ಕರ್ನಾಟಕ ರಕ್ಷಣಾ ವೇದಿಕೆ

ಕರ್ನಾಟಕದ ರಾಜಕೀಯ ಕ್ಷೇತ್ರದಲ್ಲಿ ನಾನು ಅತ್ಯಂತ ಮೆಚ್ಚಿಕೊಂಡ ವ್ಯಕ್ತಿ, ಶ್ರೀ ಅನಂತ ಕುಮಾರ್. ಅವರು ಕನ್ನಡವನ್ನು ಅತಿಯಾಗಿ ಪ್ರೀತಿಸುತ್ತಿದ್ದರು. ಕನ್ನಡದ ಬಗ್ಗೆ ಗಂಭೀರವಾಗಿ ಯೋಚಿಸುತ್ತಿದ್ದರು. ಅಖಂಡ ಕರ್ನಾಟಕವನ್ನು ಸಮೃದ್ಧವಾಗಿ ಕಟ್ಟಬೇಕು ಎನ್ನುವ ದೊಡ್ಡ ಕನಸು ಅನಂತಕುಮಾರರಿಗಿತ್ತು.

ಅನಂತಕುಮಾರ್ ನನ್ನನ್ನು ಕಿರಿಯ ಸಹೋದರನಂತೆ ನಡೆಸಿಕೊಂಡಿದ್ದರು. ನಾನೂ ಕೂಡ ಅವರೊಡನೆ ಗಂಭೀರವಾಗಿ, ಗೌರವಯುತವಾಗಿ ನಡೆದುಕೊಳ್ಳುತ್ತಿದ್ದೆ. ಅನಂತಕುಮಾರ್ ಉಪಸ್ಥಿತಿಯಿರದ ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕ್ರಮಗಳೇ ಇಲ್ಲವೆಂಬಷ್ಟು ಉತ್ತಮ ಸಂಬಂಧ ನಮ್ಮ ನಡುವೆ ಇತ್ತು.

ಕರ್ನಾಟಕದ ಇತಿಹಾಸದಲ್ಲಿ ಎಷ್ಟೋ ಜನರು ಸಂಸದರಾಗಿ ಆಯ್ಕೆಯಾಗಿದ್ದಾರೆ. ಆದರೆ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳ ನಡುವಣ ಕೊಂಡಿಯಾಗಿ ಕೆಲಸ ಮಾಡಿದವರು ಅನಂತಕುಮಾರರೊಬ್ಬರೇ. ಅವರು ರಾಜ್ಯದ ಹಿತದ ವಿಷಯ ಬಂದಾಗ ಪಕ್ಷಾತೀತವಾಗಿ ವರ್ತಿಸುತ್ತಿದ್ದರು.

ಕಾವೇರಿ ಜಲವಿವಾದದ ಬಗ್ಗೆ ನ್ಯಾಯ ಮಂಡಳಿ ನೀಡಿದ ಐತೀರ್ಪಿನ ವಿರುದ್ಧವಾಗಿ ಕರ್ನಾಟಕದಾದ್ಯಂತ ನಾವು ಚಳವಳಿಯನ್ನು ಹಮ್ಮಿಕೊಂಡಿದ್ದೆವು. ಆದರೆ ಕೇಂದ್ರ ಸರಕಾರದ ಗಮನ ಸೆಳೆಯಬೇಕಾದರೆ ನವದೆಹಲಿಗೂ ನಮ್ಮ ಚಳವಳಿಯನ್ನು ವಿಸ್ತರಿಸಬೇಕೆಂದು ನಿರ್ಧರಿಸಿದ್ದೆವು. ಹಾಗೆ ನೋಡಿದರೆ ನಮ್ಮ ನಿರ್ಧಾರಕ್ಕೆ ಅನಂತಕುಮಾರರೇ ಕಾರಣ. ಆಗ ಅನಂತಕುಮಾರರು ವಿರೋಧ ಪಕ್ಷದಲ್ಲಿದ್ದು, ಸಂಸತ್ ಸದಸ್ಯರಾಗಿದ್ದರು. ಪ್ರಧಾನ ಮಂತ್ರಿಗಳನ್ನು ಭೇಟಿಯಾಗುವ ನಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದಾಗ ಅನಂತಕುಮಾರರು ನಮ್ಮನ್ನು ದೆಹಲಿಗೆ ಆಮಂತ್ರಿಸಿದರು. ಪ್ರಧಾನ ಮಂತ್ರಿಗಳನ್ನು ಭೇಟಿಯಾಗುವ ಸಂದರ್ಭದಲ್ಲಿ ನೀವೊಬ್ಬರೇ ಬಂದರೆ ಸಾಲದು; ಸಾವಿರಾರು ಜನರನ್ನು ಕರೆದುಕೊಂಡು ಬರಬೇಕು ಎಂದು ಸೂಚಿಸಿದರು. ಅವರ ಸೂಚನೆಯಂತೆ ನಾವು ಸುಮಾರು 5000 ಜನರು ದೆಹಲಿಯನ್ನು ತಲುಪಿದೆವು.

ನಮಗೆ ಕಾರ್ಯಕರ್ತರ ಕೊರತೆ ಇರಲಿಲ್ಲ. ಆದರೆ ಅಷ್ಟೊಂದು ಜನರನ್ನು ದೆಹಲಿಗೆ ಕರೆದುಕೊಂಡು ಹೋಗಲು ಸೌಲಭ್ಯ ಮತ್ತು ನಿಭಾಯಿಸುವ ಅನುಭವವಿರಲಿಲ್ಲ. ಆ ಎಲ್ಲ ಜವಾಬ್ದಾರಿಗಳನ್ನು ಅನಂತ ಕುಮಾರರೇ ಹೊತ್ತುಕೊಂಡರು. ನಮ್ಮ ಪ್ರಯಾಣಕ್ಕೆ ರೈಲ್ವೇ ಇಲಾಖೆಯ ಮೂಲಕ ಎಲ್ಲ ರೈಲುಗಳಲ್ಲಿ ಹೆಚ್ಚುವರಿ ಬೋಗಿಗಳನ್ನು ಹಾಕಿಸಿಕೊಟ್ಟರು. ಜಂತರ್ ಮಂತರ್ ಪ್ರದೇಶದಲ್ಲಿ ನಮ್ಮ ಪ್ರತಿಭಟನೆಗೆ ಎಲ್ಲ ವ್ಯವಸ್ಥೆಯನ್ನೂ ಮಾಡಿಕೊಟ್ಟರು. ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಮನಮೋಹನ ಸಿಂಗ್ ಜೊತೆಗೆ ಭೇಟಿಯನ್ನೂ ನಿಗದಿಪಡಿಸಿಕೊಟ್ಟರು. ನಮ್ಮಲ್ಲಿ ಯಾರಿಗೂ ಹಿಂದಿ ಅರ್ಥವಾಗುತ್ತಿರಲಿಲ್ಲ. ಹೀಗಾಗಿ ಅನಂತಕುಮಾರರು ನಮ್ಮ ನಡುವೆ ದುಭಾಷಿಯಾಗಿಯೂ ವರ್ತಿಸಿದರು. ಅನಂತಕುಮಾರರ ವ್ಯಕ್ತಿತ್ವದ ಘನತೆ ಆಗ ನಮಗೆ ಮನವರಿಕೆಯಾಯಿತು. ಅವರು ಅಧಿಕಾರದಲ್ಲಿ ಇರದಿದ್ದರೂ ಎಲ್ಲರ ಜೊತೆ ಉತ್ತಮ ಬಾಂಧವ್ಯ ಹೊಂದಿದ್ದರು. ಪ್ರಧಾನ ಮಂತ್ರಿಗಳ ಕಛೇರಿಯಲ್ಲಂತೂ ಎಲ್ಲರೂ ಅನಂತಕುಮಾರರನ್ನು ತಲೆಬಾಗಿ ಸ್ವಾಗತಿಸಿದ್ದನ್ನು ನೋಡಿ ನಮಗೆ ಬೆರಗಾಯಿತು.

ಕಾವೇರಿ ನೀರಿನ ವಿಷಯದಲ್ಲಿ ಕರ್ನಾಟಕಕ್ಕೆ ಇನ್ನೊಮ್ಮೆ ಅನ್ಯಾಯವಾದಾಗ ನಾವು ಹತ್ತು ಸಾವಿರ ಜನರು ಮತ್ತೆ ದೆಹಲಿಗೆ ಹೋದೆವು. ಆಗ ರೈತ ಸಂಘಟನೆ, ದಲಿತ ಸಂಘಟನೆ ಮತ್ತು ಅನೇಕ ಕನ್ನಡಪರ ಸಂಘಸಂಸ್ಥೆಗಳು ನಮ್ಮ ಜೊತೆಗಿದ್ದವು. ಅನಂತಕುಮಾರರು ನಮಗೆ ದೆಹಲಿಯ ಅಂಬೇಡ್ಕರ್ ಭವನದ ದೊಡ್ಡ ಮೈದಾನದಲ್ಲಿ ಬೃಹತ್ ಪೆಂಡಾಲ್ ಹಾಕಿಸಿ ಉಳಿದುಕೊಳ್ಳುವ ವ್ಯವಸ್ಥೆ ಮಾಡಿದ್ದರು. ಜೊತೆಗೆ ಎರಡು ದಿನಗಳ ಊಟದ ವ್ಯವಸ್ಥೆಯನ್ನೂ ನೋಡಿಕೊಂಡಿದ್ದರು. ಅನಂತಕುಮಾರರು ನಮ್ಮ ಕರ್ನಾಟಕ ರಕ್ಷಣಾ ವೇದಿಕೆಯ ಭಾಗವೇ ಆಗಿದ್ದರು. ನಮ್ಮ ಎಲ್ಲ ಚಟುವಟಿಕೆಗಳಿಗೆ ಅವರು ನೀಡಿದ ಬೆಂಬಲವನ್ನು ನಾವು ಎಂದಿಗೂ ಮರೆಯುವಂತಿಲ್ಲ.

ಶ್ರೀ ಅನಂತಕುಮಾರ್ ಅವರಲ್ಲಿ ಕನ್ನಡದ ಬಗ್ಗೆ ಭಾರೀ ಕಳಕಳಿ ಇತ್ತು. ಅವರು ಸಾಹಿತ್ಯ, ಜಾನಪದ, ರಾಜ್ಯದ ಇತಿಹಾಸಗಳ ಬಗೆಗೆ ಮಾತ್ರವಲ್ಲದೆ ಕನ್ನಡಿಗರ ಸಂಸ್ಕೃತಿಯ ಹಿರಿಮೆಯ ಬಗ್ಗೆ ಮಾತನಾಡುತ್ತಿದ್ದರು. ಕರ್ನಾಟಕದಲ್ಲಿ ಪ್ರತಿ 40 ಕಿಲೋ ಮೀಟರ್ ಅಂತರದಲ್ಲಿ ಭಾಷೆ, ಸಂಸ್ಕೃತಿ, ಆಚಾರವಿಚಾರಗಳು, ತಿಂಡಿತಿನಿಸುಗಳು ಬದಲಾಗುವುದರ ಕುರಿತು ಅತ್ಯುತ್ಸಾಹದಿಂದ ಮಾತನಾಡುತ್ತಿದ್ದರು. ಅವರ ಮಾತುಗಳನ್ನು ಕೇಳುತ್ತಿದ್ದರೆ ಒಂದು ಮಹಾನ್ ಗ್ರಂಥವನ್ನು ಓದುತ್ತಿದ್ದಂತೆ ಅನಿಸುತ್ತಿತ್ತು. ಅವರೊಂದು ವಿಶ್ವಕೋಶದಂತಿದ್ದರು. ನನ್ನ ಜೀವನಕಾಲದಲ್ಲಿ ನಾನು ನೋಡಿದ ಕರ್ನಾಟಕದ ಅತ್ಯಂತ ದೊಡ್ಡ ವಿಚಾರವಂತ ರಾಜಕಾರಣಿ, ಶ್ರೀ ಅನಂತಕುಮಾರ್ ಎಂದರೆ ಅತಿಶಯೋಕ್ತಿಯಲ್ಲ.

ಅನಂತಕುಮಾರರ ಮನೆಯ ಆತಿಥ್ಯವನ್ನಂತೂ ನಾನು ಮರೆಯುವ ಹಾಗಿಲ್ಲ. ಅವರ ಮನೆಗೆ ನಾವು ಅನೇಕ ಬಾರಿ ಹೋಗಿ ಚರ್ಚೆ ಮಾಡುತ್ತಿದ್ದೆವು. ಅವರ ಶ್ರೀಮತಿಯವರು ಯಾವತ್ತೂ ನಮ್ಮನ್ನು ಹಾಗೇ ಕಳುಹಿಸುತ್ತಿರಲಿಲ್ಲ. ಅವರ ಮನೆಯ ಚಕ್ಕುಲಿ, ನಿಪ್ಪಟ್ಟು ಮುಂತಾದ ತಿನಿಸುಗಳು, ಸೊಗಸಾದ ಬಿಸಿ ಬಿಸಿ ಕಾಫಿ ನಮಗೆ ಎಂದಿನ ಆಕರ್ಷಣೆ.

ಅನಂತಕುಮಾರರು ನಮ್ಮನ್ನು ತಮ್ಮ ಕಛೇರಿಗೆ ಕರೆಯಿಸಿಕೊಂಡು ಅನೇಕ ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದರು. ಹೊಸ ಹೊಸ ಸಲಹೆಗಳನ್ನು ನೀಡುತ್ತಿದ್ದರು. ಅವರು ನೀಡಿದ ಸ್ಫೂರ್ತಿಯಿಂದಲೇ ನಾವು ಅರಮನೆ ಮೈದಾನದಲ್ಲಿ ವಿಶ್ವ ಕನ್ನಡಿಗರ ಜಾಗೃತಿ ಸಮ್ಮೇಳನ ನಡೆಸಿದೆವು. ಆ ಸಂದರ್ಭದಲ್ಲಿ 42ದೇಶಗಳ ಕನ್ನಡ ಸಂಘಗಳನ್ನು ಖುದ್ದಾಗಿ ಸಂಪರ್ಕಿಸಿ ಅವರ ವಿಳಾಸ, ದೂರವಾಣಿ ಸಂಖ್ಯೆಗಳನ್ನು ನಮಗೆ ಒದಗಿಸಿ ಕೊಟ್ಟಿದ್ದರು. ನನ್ನ ಜೊತೆ ಕುಳಿತು ಇಡೀ ಕಾರ್ಯಕ್ರಮದ ರೂಪುರೇಷೆಯನ್ನು ಹಾಕಿಕೊಟ್ಟರು. ಅತಿಥಿಗಳಿಗೆ ಉತ್ತಮ ವಸತಿ, ಊಟ ಮತ್ತು ಸಂಚಾರ ವ್ಯವಸ್ಥೆಯನ್ನು ಕಲ್ಪಿಸಲು ಮಾರ್ಗದರ್ಶನ ನೀಡಿದರು. ಈ ಅದ್ಭುತವಾದ ಸಮಾವೇಶದಲ್ಲಿ 42ದೇಶಗಳಿಂದ ಬಂದ ಕನ್ನಡಿಗರು ಸಂಭ್ರಮದಿಂದ ಭಾಗವಹಿಸಿದರು.



ಕನ್ನಡ ರಕ್ಷಣಾ ವೇದಿಕೆಯ ಎಲ್ಲ ಚಟುವಟಿಕೆಗಳಿಗೆ ಅನಂತಕುಮಾರರು ಸಂಪೂರ್ಣ ಬೆಂಬಲ ನೀಡಿದ್ದರು. ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ನೀಡುವ ಕುರಿತು ಪ್ರಧಾನ ಮಂತ್ರಿಯವರನ್ನು ಭೇಟಿಮಾಡಲು ನಾವು ಬೆಂಗಳೂರಿನಿಂದ ಒಂದು ದೊಡ್ಡ ನಿಯೋಗವನ್ನು ತೆಗೆದುಕೊಂಡು ದೆಹಲಿಗೆ ಹೋಗಿದ್ದೆವು. ಆಗಲೂ ನಮ್ಮನ್ನು ಪ್ರಧಾನ ಮಂತ್ರಿಗಳಿಗೆ ಭೇಟಿ ಮಾಡಿಸಿದರು. ಕರ್ನಾಟಕದ ಬೇರೆ ಯಾವ ಸಂಸದರಿಂದಲೂ ನಮಗೆ ನಿರೀಕ್ಷಿತ ಮಟ್ಟದ ಸಹಾಯ ದೊರೆಯಲಿಲ್ಲ. ದೆಹಲಿಯಲ್ಲಿ ಕೆಲಸವಾಗಬೇಕಾದರೆ ಯಾರನ್ನು ಭೇಟಿಯಾಗಬೇಕು, ಹೇಗೆ ಮಾತನಾಡಬೇಕು, ಎಂಬ ಎಲ್ಲವೂ ಅನಂತಕುಮಾರರಿಗೆ ಚೆನ್ನಾಗಿ ಗೊತ್ತಿತ್ತು. ಇದು ಕರ್ನಾಟಕದಲ್ಲಿ ಎಲ್ಲರಿಗೂ ತಿಳಿದಿರುವ ವಿಷಯ. ಆದಿಚುಂಚನಗಿರಿಯ ಬಾಲಗಂಗಾಧರನಾಥ ಸ್ವಾಮಿಗಳು ಸರಕಾರದಿಂದ ಮಠಕ್ಕೆ ಏನಾದರೂ ಕೆಲಸವಾಗಬೇಕಿದ್ದರೆ ಅನಂತಕುಮಾರರನ್ನು ಕರೆಯಿರಿ ಎನ್ನುತ್ತಿದ್ದರು. ಇಂದಿನ ಪೀಠಾಧಿಪತಿಗಳಾಗಿರುವ ನಿರ್ಮಲಾನಂದ ಮಹಾಸ್ವಾಮಿಗಳ ಜೊತೆಯೂ ಅನಂತಕುಮಾರರಿಗೆ ನಿಕಟ ಸಂಬಂಧವಿತ್ತು. ಒಬ್ಬ ಸಂಸದ ಎಂದು ಗೌರವದಿಂದ ಮತ್ತು ಗಂಭೀರವಾಗಿ ಮಾತನಾಡಿಸುವುದಿದ್ದರೆ ಅದು ಅನಂತಕುಮಾರ್ ಒಬ್ಬರನ್ನೇ ಎಂದು ಅನೇಕ ಗಣ್ಯರು ಹೇಳುತ್ತಿದ್ದರು.

ಕರ್ನಾಟಕ ರಕ್ಷಣಾ ವೇದಿಕೆ ಅನೇಕ ಹೋರಾಟಗಳನ್ನು ನಡೆಸಿದೆ. ನಮ್ಮ ಕಾರ್ಯಕರ್ತರನ್ನು ಬಂಧಿಸಿ ಮೊಕದ್ದಮೆ ಹೂಡಿದ ಅನೇಕ ಸಂದರ್ಭಗಳಿವೆ. ಅಂತಹ ಸಮಯದಲ್ಲಿ ಅನಂತಕುಮಾರರು ಮುಖ್ಯಮಂತ್ರಿಗಳನ್ನು ನೇರವಾಗಿ ದೂರವಾಣಿಯ ಮೂಲಕ ಸಂಪರ್ಕಿಸಿ ನಮ್ಮ ಪರವಾಗಿ ವಾದ ಮಾಡುತ್ತಿದ್ದರು. " ಈ ಚಳುವಳಿಗಾರರನ್ನು ಯಾಕೆ ಬಂಧಿಸುತ್ತೀರಿ, ಅವರು ಯಾರಿಗೋಸ್ಕರ ಹೋರಾಟ ಮಾಡುತ್ತಿದ್ದಾರೆ ಎಂದು ಯೋಚಿಸಿ. ಅದನ್ನು ನಾವು ನೀವು ಮಾಡುತ್ತೇವೆಯೇ? ಅವರನ್ನು ಕೈ ಕಟ್ಟಿ ಕುಳ್ಳಿರಿಸುವುದು ನ್ಯಾಯವಲ್ಲ. ಕನ್ನಡದ ವಿಷಯದಲ್ಲಿ ನಮಗೆ ಯಾರಿಗೂ ಇಲ್ಲದ ಬದ್ಧತೆ ಅವರಲ್ಲಿದೆ" ಎಂದು ಆಗಿನ ಮುಖ್ಯಮಂತ್ರಿಗಳಿಗೆ ಹೇಳಿ ನಮ್ಮ ಕಾರ್ಯಕರ್ತರ ಮೇಲಿನ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವಂತೆ ಮಾಡಿದ್ದಾರೆ. ಅವರ ನಿಧನದ ನಂತರವೂ ನಾವು ಅನೇಕ ಚಳುವಳಿಗಳನ್ನು ಮಾಡಿದ್ದೇವೆ. ನಮ್ಮ ಅನೇಕ ಕಾರ್ಯಕರ್ತರ ಮೇಲೆ ಮೊಕದ್ದಮೆಗಳು ದಾಖಲಾಗಿವೆ. ಅವರು ದಿನಗಟ್ಟಲೆ ನ್ಯಾಯಾಲಯಗಳಿಗೆ ಅಲೆದಾಡುತ್ತಿದ್ದಾರೆ. ಆದರೆ ಅನಂತಕುಮಾರರಂತೆ ನಮ್ಮ ಬೆನ್ನಿಗೆ ನಿಂತ ಇನ್ನೊಬ್ಬ ರಾಜಕಾರಣಿಯನ್ನು ನಾವು ಕಂಡಿಲ್ಲ.

ಕನ್ನಡಕ್ಕಾಗಿ ಅವರು ಪ್ರಾಮಾಣಿಕವಾಗಿ ಕೆಲಸ ಮಾಡಿದರು. ಅವರ ನುಡಿಯಲ್ಲಿ ಮತ್ತು ನಡೆಯಲ್ಲಿ ಅಂತರವಿರಲಿಲ್ಲ. ಕನ್ನಡದಲ್ಲಿಯೇ ಸಹಿ ಮಾಡುವ ಅವರು ಲೋಕಸಭೆಯಲ್ಲಿ ಕನ್ನಡದಲ್ಲಿಯೇ ಪ್ರಮಾಣವಚನ ಸ್ವೀಕರಿಸುವ ಪರಿಪಾಠ ಪ್ರಾರಂಭಿಸಿದರು. ವಿಶ್ವಸಂಸ್ಥೆಯಲ್ಲಿಯೂ ಕನ್ನಡದ ಧ್ವನಿಯನ್ನು ಮೊಳಗಿಸಿದರು.

ಪಕ್ಷ ಪಕ್ಷಗಳ ನಡುವೆ ಇಷ್ಟೊಂದು ವೈಮನಸ್ಯ ಇರುವ ಕಾಲದಲ್ಲಿ ಅನಂತಕುಮಾರರು ಅಪರೂಪದ ವ್ಯಕ್ತಿಯಾಗಿದ್ದರು. ಎಲ್ಲ ಪಕ್ಷದವರಿಂದಲೂ ಕೆಲಸ ಮಾಡಿಸಿಕೊಳ್ಳಬಲ್ಲ ಚಾಣಾಕ್ಷತೆ ಅವರಲ್ಲಿತ್ತು. ಅವರು ವೇದಿಕೆಯ ಮೇಲಿನಿಂದ ವಿರೋಧಿಗಳ ಬಗ್ಗೆ ಯಾವಾಗಲೂ ಆರೋಗ್ಯಕರವಾದ ಟೀಕೆಗಳನ್ನು ಮಾಡುತ್ತಿದ್ದರು. ವೇದಿಕೆಯಿಂದ ಹೊರಗೆ ಬಂದೊಡನೆ "ಇದುವರೆಗೆ ತಮ್ಮನ್ನು ಟೀಕಿಸಿದ್ದು ಇವರೇನಾ?" ಎಂಬಷ್ಟು ಆತ್ಮೀಯವಾಗಿ ಅವರ ಜೊತೆ ನಡೆದುಕೊಳ್ಳುತ್ತಿದ್ದರು.

ನಮ್ಮ ಪ್ರತಿಯೊಂದು ನಡೆಯನ್ನೂ ಸೂಕ್ಷ್ಮವಾಗಿ ಗಮನಿಸಿ ಬೆನ್ನು ತಟ್ಟುವ, ದಾರಿ ತಪ್ಪಿದಾಗ ಸರಿದಾರಿ ತೋರುವ ಹಿರಿತನ ಅವರಲ್ಲಿತ್ತು. ಅವರನ್ನು ಕಳೆದುಕೊಂಡ ಕನ್ನಡ ಚಳವಳಿ ಬಡವಾಗಿದೆ. ಅಂತಹ ಇನ್ನೊಬ್ಬ ವ್ಯಕ್ತಿಯನ್ನು ನಾವು ಇಂದು ಕಾಣಲಾರೆವು. ನಮ್ಮ ಅನಂತಕುಮಾರರು ಇಂದು ನಮ್ಮೊಂದಿಗಿಲ್ಲದಿರಬಹುದು, ಆದರೆ ಅವರ ಆತ್ಮ ನಮ್ಮನ್ನು ಸದಾ ಗಮನಿಸುತ್ತ ಸರಿದಾರಿಯಲ್ಲಿ ಮುನ್ನಡೆಸುತ್ತಿದೆ. ಶ್ರೀಮತಿ ತೇಜಸ್ವಿನಿ ಅನಂತಕುಮಾರರು ತಮ್ಮ ಪತಿಯ ಎಲ್ಲ ಸಮಾಜಮುಖಿ ಸೇವಾಕಾರ್ಯಗಳನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಅವರು ಸಾವಿರಾರು ಜನರಿಗೆ ನಿಜವಾದ ಅರ್ಥದಲ್ಲಿ ಅನ್ನಪೂರ್ಣೆಯೇ ಆಗಿದ್ದಾರೆ. ಅವರ ಕೆಲಸಗಳಲ್ಲಿ ಕೈ ಜೋಡಿಸುವುದೇ ನಾವು ಅನಂತಕುಮಾರರಿಗೆ ಅರ್ಪಿಸುವ ಶ್ರದ್ಧಾಂಜಲಿ.

# ವ್ಯಕ್ತಿತ್ವ ನಿರ್ಮಾಣದಿಂದ ರಾಷ್ಟ್ರ ನಿರ್ಮಾಣ

ಡಾ. ವಾಮನಾಚಾರ್ಯ
ರಾಜಕೀಯ ವಿಶ್ಲೇಷಕರು ಹಾಗೂ ಸಾಮಾಜಿಕ ಕಾರ್ಯಕರ್ತರು

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅತ್ಯಂತ ಸಾಮಾನ್ಯರೂ ನಾಯಕರಾಗಿ ಬೆಳೆಯುವುದಕ್ಕೆ ಅವಕಾಶವಿದೆ. ನಾಯಕರಾಗುವುದೆಂದರೆ ಕೇವಲ ಚುನಾವಣೆಗೆ ನಿಂತು ಬಹುಮತ ಗಳಿಸಿ ಆರಿಸಿಬರುವುದಲ್ಲ. ಸಮಾಜಕ್ಕೆ ಇರುವುದು ರಾಜಕೀಯ ಆಯಾಮ ಮಾತ್ರವಲ್ಲ. ಸಾಹಿತ್ಯ, ಕಲೆ, ಶಿಕ್ಷಣ, ಆರ್ಥಿಕ ಮುಂತಾದ ಸಮಾಜದ ಹಲವು ಕ್ಷೇತ್ರಗಳಲ್ಲಿ ಚಾರಿತ್ರ್ಯ ಹೊಂದಿರುವ, ಇಡೀ ದೇಶದ ಕಲ್ಪನೆಯನ್ನು ಹೊಂದಿದ್ದು, ತಮ್ಮ ದೂರ ದೃಷ್ಟಿಯಿಂದ ದೇಶವನ್ನು ಸರ್ವತೋಮುಖವಾಗಿ ಮುನ್ನಡೆಸಬಲ್ಲ ನಾಯಕರ ಅವಶ್ಯಕತೆಯನ್ನು ನಮ್ಮ ಹಿಂದಿನ ತಲೆಮಾರಿನ ಜನರು ಮನಗಂಡಿದ್ದರು. ಹೀಗಾಗಿ ಅವರು "ವ್ಯಕ್ತಿತ್ವ ನಿರ್ಮಾಣದಿಂದ ರಾಷ್ಟ್ರ ನಿರ್ಮಾಣ" ಎಂಬ ತತ್ತ್ವವನ್ನು ಆಧಾರವಾಗಿರಿಸಿಕೊಂಡು ಅನೇಕ ಪ್ರಯತ್ನಗಳನ್ನು ರಾಷ್ಟ್ರಮಟ್ಟದಲ್ಲಿಯೂ ರಾಜ್ಯಮಟ್ಟದಲ್ಲಿಯೂ ನಡೆಸಿದ್ದರು.

ವ್ಯಕ್ತಿಯು ಒಳ್ಳೆಯತನ, ಉತ್ತಮ ಚಾರಿತ್ರ್ಯ, ಉತ್ತಮ ಜ್ಞಾನ ಮತ್ತು ಕ್ರಿಯಾಶೀಲತೆಗಳನ್ನು ರೂಢಿಸಿಕೊಳ್ಳಬೇಕು. ಆತ ತನ್ನ ಇತಿಹಾಸ ಮತ್ತು ತನ್ನ ಸಮಾಜದ ಇಂದಿನ ಪರಿಸ್ಥಿತಿಯ ಬಗ್ಗೆ ಅರಿವು ಮೂಡಿಸಿಕೊಂಡು ಸುಸಂಸ್ಕೃತ ಮತ್ತು ಸುಭದ್ರ ದೇಶವನ್ನು ಕಟ್ಟಲು ಸ್ವತಂತ್ರವಾಗಿ ಯೋಚಿಸಬಲ್ಲ ಸಾಮರ್ಥ್ಯವನ್ನು ಗಳಿಸಿಕೊಳ್ಳಬೇಕು. ಅಂತಹ ಅನೇಕ ವ್ಯಕ್ತಿಗಳು ಮುಂದೆ ವಿಧಾನ ಸಭೆ, ಸಂಸತ್ತುಗಳಿಗೆ ಆರಿಸಿ ಬಂದಾಗ ಅಥವ ಇತರ ಯಾವುದೇ ಕ್ಷೇತ್ರದಲ್ಲಿ ಮುಂಚೂಣಿಗೆ ಬಂದಾಗ ಇತರರಿಗಿಂತ ಭಿನ್ನವಾಗಿ ಗಮನಸೆಳೆಯುವಂತಹ ರೀತಿಯಲ್ಲಿ ಕೆಲಸ ಮಾಡಬೇಕು. ಇಂತಹ ಲಕ್ಷಣಗಳನ್ನು ಹೊಂದಿರುವ ವ್ಯಕ್ತಿ ಸಮಾಜದ ನಾಯಕತ್ವವನ್ನು ವಹಿಸಿಕೊಂಡಾಗ ಸಮಾಜದಲ್ಲಿ ಸರ್ವತೋಮುಖ ಪ್ರಗತಿಯುಂಟಾಗುತ್ತದೆ.





ನಮ್ಮ ಸಂಸ್ಕೃತಿಯ ಬಗ್ಗೆ ಎಲ್ಲರಲ್ಲಿಯೂ ತಿಳುವಳಿಕೆ ಮೂಡುವವರೆಗೆ, ಅಭಿಮಾನ ಬರುವವರೆಗೆ ದೇಶ ಒಂದಾಗುವುದು ಅಸಾಧ್ಯ ಎಂದು ನಾವು ತಿಳಿದಿದ್ದೇವೆ. ಆದುದರಿಂದ ಉತ್ತಮ ಚಾರಿತ್ರ್ಯ ಮತ್ತು ಏನಾದರೂ ಸಾಧಿಸಬೇಕೆಂಬ ಸಾಹಸಪ್ರವೃತ್ತಿಯನ್ನು ಹೊಂದಿದ ಸ್ವಯಂಸೇವಕರ ಸಂಘಟನೆಯನ್ನು ನಿರ್ಮಾಣ ಮಾಡುವ ಪ್ರಕ್ರಿಯೆಯನ್ನು ನಾವು ಪ್ರಾರಂಭ ಮಾಡಿದ್ದೇವೆ. ಈ ದಿಸೆಯಲ್ಲಿ ಮೊದಲಿಗೆ ತರಬೇತಿ ಶಿಬಿರಗಳನ್ನು ನಡೆಸುತ್ತಿದ್ದೇವೆ. ಪ್ರತಿಯೊಂದು ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಪ್ರಮುಖರನ್ನು ಕರೆಯಿಸಿ ವರ್ಷದಲ್ಲಿ ಒಂದು ಬಾರಿ "ಪ್ರಶಿಕ್ಷಣ ವರ್ಗ" ಗಳನ್ನು ನಡೆಸುತ್ತಿದ್ದೇವೆ. ಭಾರತದ, ಕರ್ನಾಟಕದ ಅನೇಕ ಶಾಲಾಕಾಲೇಜುಗಳಲ್ಲಿ ಈ ರೀತಿಯ ಅನೇಕ ಶಿಬಿರಗಳನ್ನು ನಡೆಸಿದ್ದೇವೆ.

ಶ್ರೀ ಅನಂತಕುಮಾರ್, ಶ್ರೀ ಪ್ರಮೋದ್ ಮಹಾಜನ್, ಶ್ರೀ ವೆಂಕಯ್ಯ ನಾಯ್ಡು ಮುಂತಾದವರು ನಮ್ಮ ಈ ರೀತಿಯ ಪ್ರಯತ್ನಗಳ ಫಲವಾಗಿ ಬೆಳೆದ ನಾಯಕರು. ಇವರೆಲ್ಲ ತೀರ ಸಾಮಾನ್ಯ ಕುಟುಂಬಗಳಲ್ಲಿ ಜನಿಸಿದವರು. ಅವರು ಯಾರೂ ತಂದೆ ತಾಯಿಯರ ಅಧಿಕಾರವನ್ನು ಪರಂಪರೆಯಿಂದ ಪಡೆದು ಬಂದವರಲ್ಲ. ಉದಾಹರಣೆಗೆ, ಶ್ರೀ ಅನಂತಕುಮಾರರ ತಂದೆ ರೈಲ್ವೇ ಇಲಾಖೆಯಲ್ಲಿ ಸಾಮಾನ್ಯ ನೌಕರರಾಗಿದ್ದವರು. ಆದರೆ ಅನಂತಕುಮಾರರಲ್ಲಿ ನಿರ್ಮಾಣಗೊಂಡ ಅಪ್ರತಿಮ ವ್ಯಕ್ತಿತ್ವದ ಕಾರಣದಿಂದ ಅವರು ಉನ್ನತ ಸ್ಥಾನಕ್ಕೇರುವುದು ಸಾಧ್ಯವಾಯಿತು. ಅಂತಹ ಸಾಮಾನ್ಯ ಜನರ ಒಂದು ಸಮರ್ಥ ತಂಡವೇ ನಿರ್ಮಾಣವಾಗಿ ಒಂದು ದೊಡ್ಡ ವ್ಯವಸ್ಥೆಯನ್ನು ಕುಶಲತೆಯಿಂದ ನಡೆಸಿಹೋಗುವ ಮಟ್ಟಕ್ಕೇರಲು ಹಲವಾರು ದಶಕಗಳ ಹಿಂದೆ ಅವರು ಪಡೆದ ವ್ಯಕ್ತಿತ್ವ ನಿರ್ಮಾಣ, ವ್ಯಕ್ತಿತ್ವ ವಿಕಸನಗಳ ಪ್ರಧಾನ ಲಕ್ಷ್ಯವನ್ನು ಹೊಂದಿದ ಪ್ರಶಿಕ್ಷಣವೇ ಕಾರಣ. ಈ ಯಶಸ್ಸು ನಮ್ಮಲ್ಲಿ ಒಂದು ವಿಶ್ವಾಸವನ್ನು ಮೂಡಿಸಿದೆ.

ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ನಾಯಕತ್ವದ ತರಬೇತಿಯನ್ನು ಪಡೆಯಲು ನಮ್ಮ ಯುವಕರು ಮುಂದೆ ಬರಬೇಕು. ಈ ಹಂತದಲ್ಲಿ ನನಗೆ ಶ್ರೀ ಪ್ರಮೋದ್ ಮಹಾಜನ್ ಹೇಳಿದ ಘಟನೆ ನೆನಪಿಗೆ ಬರುತ್ತಿದೆ. ಒಂದು ಕಾರ್ಯಕ್ರಮದ ಪ್ರಾಯೋಜಕರು "ಈ ದಿನ ಕಾರಿನ ಚಾಲಕನೇ ಬರಲಿಲ್ಲವಲ್ಲ ಏನು ಮಾಡುವುದು? " ಎಂದು ಪೇಚಾಡಿಕೊಳ್ಳುತ್ತಿದ್ದಾಗ ಕಾರ್ಯಕ್ರಮದ ಅತಿಥಿಯಾಗಿದ್ದ ವ್ಯಕ್ತಿ ತಾವೇ ಕಾರು ನಡೆಸಲು ಮುಂದೆ ಬಂದರಂತೆ. "ನಿಮಗೆ ಕಾರು ಚಲಾಯಿಸಲು ಬರುತ್ತದೆಯೆ? ನಿಮ್ಮ ಹತ್ತಿರ ಲೈಸೆನ್ಸ್ ಇದೆಯೆ?" ಎಂದು ಅವರು ಸಂಶಯ ವ್ಯಕ್ತಪಡಿಸಿದಾಗ ಆತ " ಬಿಡ್ರೀ, ನಾನು ಶಾಸಕನೇ ಆಗಿದ್ದೇನಂತೆ, ಈ ಕಾರು ಚಲಾಯಿಸುವುದೇನು ಮಹಾ" ಎಂದು ಉತ್ತರಿಸಿದರಂತೆ. ರಾಜಕೀಯದಲ್ಲಿ ಯಾವ ತರಬೇತಿಯ ಅಗತ್ಯವೂ ಇಲ್ಲ ಎಂದು ಅನೇಕರ ಭಾವನೆ.

ಆದರೆ ಪ್ರತಿಯೊಂದು ಕೆಲಸಕ್ಕೂ ಒಂದಷ್ಟು ತರಬೇತಿ ಇರಲೇ ಬೇಕು, ಕೆಲಸಕ್ಕೆ ಮುಂದೆ ಬರುವವರು ತಮ್ಮ ಕುಶಲತೆಯ ಬಗ್ಗೆ ಪ್ರಮಾಣವನ್ನು ಒದಗಿಸಬೇಕು, ಯಾವುದೇ ಪೂರ್ವತಯಾರಿ ಇಲ್ಲದವರು ರಾಜಕೀಯವನ್ನು ಪ್ರವೇಶಿಸಬಾರದು ಎಂಬಂತಹ ಜನಾಭಿಪ್ರಾಯ ನಮ್ಮ ದೇಶದಲ್ಲಿ ಉಂಟಾಗಬೇಕು. ಹಾಗಾದಲ್ಲಿ ಮಾತ್ರ, ಪ್ರಜಾಪ್ರಭುತ್ವದ ಭವಿಷ್ಯ ಉಜ್ವಲವಾಗಿರುತ್ತದೆ, ಆಗ ಮಾತ್ರ ಪ್ರಜಾಪ್ರಭುತ್ವದ ಪ್ರಯೋಜನ ಜನಸಾಮಾನ್ಯರಿಗೆ ಲಭಿಸುತ್ತದೆ ಎಂಬ ವಿಶ್ವಾಸ ನನ್ನದು. ("ಸೌಜನ್ಯ: ಆಕಾಶವಾಣಿ, ಮೈಸೂರು ಕೇಂದ್ರ")

## ಅನಂತಪಥ

Editor: **Gopal T.S** | Assistance: **K . Janardhana Thunga** | Layout: **Abhishek Gubbi Creatives**

Inputs: **Diwakar Hegde | H R Prakash | Poornaprajna | Sreelakshmi Vishwanath | Gomurthy Yadav | Mohanraj | Rajaram Bhat**

Sketches: **Raghupathi Sringeri** | Photographs: **Ananthakumar Pratishthana | Adamya Chethana | Wikipedia | Gopal TS | Gomurthy Yadav**

Acknowledgements: **Vishwavani Kannada Daily | Vishweshwara Bhat | AIR Mysore | Google | Wikipedia | Pramod Jois**

Printed at: **Rashtrothana Mudranalaya, Chamrajpet, Bengaluru** | Published by: **Dr. Tejaswini Ananthkumar**

For – AnanthKumar Pratishthana # 12, Sumeru,M N Krishna Rao Road, Basavanagudi, Bangalore – 04

Ph: 080 26568484 | Email: ananth.path@akp.org.in

**ಸ್ಪಷ್ಟನೆ:** ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು;
ಈ ಪತ್ರ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.

**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು. ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ.

To get a e-version of this periodical SMS your name and place to 8884182415

## ಅದಮ್ಯ ಸಂಭ್ರಮ

**( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )**



ಕರ್ನಾಟಕ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಚಿವರಾದ ಶ್ರೀ ಕೆ.ಎಸ್. ಈಶ್ವರಪ್ಪನವರು ತಮ್ಮ ಪುತ್ರ ಶ್ರೀ ಕಾಂತೇಶ್ ಮತ್ತು ಬಿಜೆಪಿ ಪಕ್ಷದ ಹಲವರು ಮುಖಂಡರೊಡನೆ ಅದಮ್ಯ ಚೇತನಕ್ಕೆ ಭೇಟಿ ನೀಡಿದ್ದ ಸಂದರ್ಭದ ಚಿತ್ರ.



ಬಾಬಾ ಸಾಹೇಬ್ ಅಂಬೇಡ್ಕರ್ ಜನ್ಮದಿನದ ಅಂಗವಾಗಿ ನಡೆದ ಸಭೆಯಲ್ಲಿ ಡಾ. ತೇಜಸ್ವಿನಿ ಅನಂತಕುಮಾರ್, ಖ್ಯಾತ ಜನಪದ ಗಾಯಕ ಅಪ್ಪಗೆರೆ ತಿಮ್ಮರಾಜು ಮೊದಲಾದವರು ಪಾಲ್ಗೊಂಡಿದ್ದರು.




ಎಂ.ಎಸ್. ರಾಮಯ್ಯ ವಿಶ್ವವಿದ್ಯಾಲಯದ ಎನ್ ಎಸ್ ಎಸ್ ವಿದ್ಯಾರ್ಥಿಗಳು ತಮ್ಮ ಕುಲಪತಿ ಮತ್ತು ರಿಜಿಸ್ಟ್ರಾರ್ ರವರೊಡನೆ ಅದಮ್ಯ ಚೇತನಕ್ಕೆ ಭೇಟಿಯಿತ್ತ ಸಂದರ್ಭ. ವಿದ್ಯಾರ್ಥಿಗಳು ಪರಿಸರ ಜಾಗೃತಿ ಮೂಡಿಸುವ ಫಲಕಗಳನ್ನು ಹಿಡಿದು ರ್‍ಯಾಲಿಯಲ್ಲಿ ಭಾಗವಹಿಸಿದರು.




ಸುವಿಧಾ ಸ್ಯಾನಿಟರಿ ನ್ಯಾಪ್ ಕಿನ್ ಗಳನ್ನು ೨೦೧೮ರ ಮಾರ್ಚ್ ತಿಂಗಳಲ್ಲಿ ಮಾರುಕಟ್ಟೆಯಲ್ಲಿ ಲಭ್ಯವಾಗುವಂತೆ ಮಾಡಿದ ನೆನಪಿನಲ್ಲಿ, ಅದಮ್ಯ ಚೇತನದಿಂದ ಬೆಂಗಳೂರು ಇನ್ನರ್ ವೀಲ್ ಮೂಲಕ ೨೦೦೦ ಸುವಿಧಾ ಸ್ಯಾನಿಟರಿ ನ್ಯಾಪ್ ಕಿನ್ ಗಳನ್ನು ನೀಡಲಾಯಿತು.



ಖ್ಯಾತ ಜ್ಯೋತಿಷ ಶಾಸ್ತ್ರಜ್ಞ ಬಿ.ವಿ.ರಾಮನ್ ರವರ ಪುತ್ರ ಶ್ರೀ ನಿರಂಜನ್ ಬಾಬು ರವರು ತಮ್ಮ ಕುಟುಂಬ ಸದಸ್ಯರೊಡನೆ ಅದಮ್ಯ ಚೇತನಕ್ಕೆ ಆಗಮಿಸಿ, ನಿತ್ಯ ಅನ್ನದಾನದ ಕೊಡುಗೆಯ ಮೂಲಕ ಮೊಮ್ಮಗನ ಹುಟ್ಟುಹಬ್ಬ ಆಚರಿಸಿದರು.




ಶ್ರೀ ಕುಮಾರಸ್ವಾಮಿಯವರು ತಮ್ಮ ಕುಟುಂಬದ ಟ್ರಸ್ಟ್ ಸದಸ್ಯರೊಡನೆ ಅದಮ್ಯಚೇತನಕ್ಕೆ ಆಗಮಿಸಿ, ಪ್ಲೇಟ್ ಬ್ಯಾಂಕಿಗೆ ಕೊಡುಗೆಯಾಗಿ ಸ್ಟೀಲ್ ತಟ್ಟೆಗಳನ್ನು ನೀಡಿದರು.

## ಅನಂತ ಚಿತ್ರಸಂಪುಟ

( ಏಪ್ರಿಲ್ ತಿಂಗಳ ನೆನಪಿನ ಹಲವು ಚಿತ್ರಗಳು )

ಸಂಕಲನ: ಶ್ರೀಮತಿ ತೇಜಸ್ವಿನಿ ಅನಂತಕುಮಾರ್



ಸಂಸತ್ ಭವನದ ಅನೆಕ್ಸ್ ಕಟ್ಟಡದ ಉದ್ಘಾಟನೆಯ ಸಂದರ್ಭದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ ಮತ್ತು ಹಿರಿಯ ಮುಖಂಡರೊಡನೆ



ಸಮಾಜೋ ಆರ್ಥಿಕ ಪರಿವರ್ತನಾ ಸಂಸ್ಥೆ (ISEC ) ಗೆ ಭಾರತದ ಉಪರಾಷ್ಟ್ರಪತಿ ಶ್ರೀ ವೆಂಕಯ್ಯ ನಾಯ್ಡುರವರು ಭೇಟಿ ನೀಡಿದ್ದ ಸಂದರ್ಭದ ಚಿತ್ರ



ಚೀನಾ ದೇಶಕ್ಕೆ ಭೇಟಿ ನೀಡಿದ್ದ ಪಾರ್ಲಿಮೆಂಟರಿ ನಿಯೋಗದ ಸದಸ್ಯರಾಗಿ ಶ್ರೀ ಅನಂತಕುಮಾರ್ ಭಾಗವಹಿಸಿದ್ದರು.




ರೇಲ್ವೆ ಸೌಲಭ್ಯವನ್ನು ಉತ್ತಮಪಡಿಸುವ ಯೋಜನೆಯ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಆಗಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ , ಕೇಂದ್ರ ರೈಲ್ವೆ ಮಂತ್ರಿ ನಿತೀಶ ಕುಮಾರರೊಡನೆ



೨೦೧೮ರ ಚುನಾವಣೆಗಳ ಅಂಗವಾಗಿ ಬೆಂಗಳೂರು ಗ್ರಾಮೀಣ ಜಿಲ್ಲೆಯಲ್ಲಿ ನಡೆದ ಪ್ರಚಾರ ಆಂದೋಲನದಲ್ಲಿ ಕಾರ್ಯಕರ್ತರೊಡನೆ



ಬೆಂಗಳೂರಿನ ಹನುಮಂತನಗರದಲ್ಲಿ ಮಾವು-ಬೇವಿನ ಗಿಡಗಳನ್ನು ನೆಡುವ ಮೂಲಕ ೨೦೧೭ರ ಯುಗಾದಿ ಹಬ್ಬದ ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡ ಶ್ರೀ ಅನಂತಕುಮಾರ್